
# ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Volume - 11 Issue - 5 Swabhimani Sahakari Monthly Pages - 20 ₹ - 12 May 2013




ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ
ಜ್ಯೋತಿಯ ಬಲದಿಂದ ಅಂಧಕಾರದ ಕೇಡು ನೋಡಯ್ಯ
ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯ
ಕೂಡಲ ಸಂಗನ ಶರಣರ ಬಲದಿಂದ ಆತ್ಮನ ಅಹಂಕಾರದ ಕೇಡು ನೋಡಯ್ಯ
ಕೂಡಲ ಸಂಗಮ ದೇವ



ರಾಮಾನುಜಾಚಾರ್ಯ ಜಯಂತಿ, ಶಂಕರಾಚಾರ್ಯ ಜಯಂತಿ,
ವಾಸವಿ ಜಯಂತಿ, ಬುದ್ಧ ಪೂರ್ಣಿಮೆ, ಅಕ್ಷಯ ತದಿಗೆ
ಹಾಗೂ ವಿಶ್ವ ಅಮ್ಮಂದಿರ ದಿನದ ಹಾರ್ದಿಕ ಶುಭಾಶಯಗಳು



ಸೌಹಾರ್ದ ಸಹಕಾರಿಗಳ ಸಂಖ್ಯೆ : 2441 - 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ - 500



ಅಧ್ಯಕ್ಷರ ಮಾತು

ರಾಜ್ಯದ ಬೆಂಗಳೂರು, ಇಂಡಿ, ಹಾಸನ, ಬೀದರ ಹಾಗೂ ಹೊಸಪೇಟೆಗಳಲ್ಲಿ ಏಕಕಾಲಕ್ಕೆ ತರಬೇತಿ ಅಭಿಯಾನ ಪ್ರಾರಂಭಗೊಂಡು ನಂತರದಲ್ಲಿ ದಿನಾಂಕ 18/4/2013ರವರೆಗೆ 10 ದಿನಗಳಲ್ಲಿ ನಡೆದ ಎಲ್ಲ ಕಾರ್ಯಕ್ರಮಗಳೂ ನಿರ್ವಿಘ್ನವಾಗಿ ನಡೆದಿವೆ. ರಾಜ್ಯದ 1624 ಸಹಕಾರಿ ಸಂಸ್ಥೆಗಳಿಂದ 2105ಕ್ಕೂ ಹೆಚ್ಚು ಜನರಿಗೆ ಪ್ರಯೋಜನವಾಗಿದೆ.

# ತರಬೇತಿ ಅಭಿಯಾನ – ಕ್ಷೇತ್ರದ ಬೆಳವಣಿಗೆಗೆ ಹೊಸ ದಿಕ್ಸೂಚಿ

ರಾಜ್ಯದ ಎಲ್ಲ ಕಾರ್ಮಿಕ ಬಂಧುಗಳಿಗೆ ಶುಭ ಹಾರೈಕೆಗಳು.

97ನೇ ಸಂವಿಧಾನ ತಿದ್ದುಪಡಿ ಆಧಾರಿತ ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿಯ ಹಿನ್ನೆಲೆಯಲ್ಲಿ ಎಲ್ಲ ಸೌಹಾರ್ದ ಸಹಕಾರಿಗಳ ಉಪವಿಧಿಗಳ ತಿದ್ದುಪಡಿ ತರಬೇತಿ ಅಭಿಯಾನವು ರಾಜ್ಯದಾದ್ಯಂತ 33 ಕೇಂದ್ರಗಳಲ್ಲಿ ಬಹಳ ಅರ್ಥಪೂರ್ಣವಾಗಿ ನಡೆದಿರುವುದು ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಹೊಸ ದಿಕ್ಸೂಚಿಯಾಗಲಿದೆ ಎಂದು ನನ್ನ ಅಭಿಪ್ರಾಯ

ದಿನಾಂಕ 3 ಏಪ್ರೀಲ್ 2013 ರಂದು ಸಹಕಾರಿಗಳ ನಿಬಂಧಕರಾದ ಶ್ರೀ ಎನ್.ಎಸ್.ಚನ್ನಪ್ಪಗೌಡರವರು ದೀಪಬೆಳಗಿಸಿ ಚಾಲನೆ ನೀಡಿ ಇದೊಂದು ಉತ್ತಮ ಕಾರ್ಯವಾಗಿದೆ ಎಂದು ಶ್ಲಾಘಿಸಿ ಕಾರ್ಯಕ್ರಮ ಅಗತ್ಯ ಹಾಗೂ ಅಮೂಲ್ಯ ಎಂದು ಹೇಳಿದ ನಂತರದಲ್ಲಿ ರಾಜ್ಯದ ಬೆಂಗಳೂರು, ಇಂಡಿ, ಹಾಸನ, ಬೀದರ ಹಾಗೂ ಹೊಸಪೇಟೆಗಳಲ್ಲಿ ಏಕಕಾಲಕ್ಕೆ ತರಬೇತಿ ಅಭಿಯಾನ ಪ್ರಾರಂಭಗೊಂಡು ನಂತರದಲ್ಲಿ ದಿನಾಂಕ 18/4/2013ರವರೆಗೆ 10 ದಿನಗಳಲ್ಲಿ ನಡೆದ ಎಲ್ಲ ಕಾರ್ಯಕ್ರಮಗಳೂ ನಿರ್ವಿಘ್ನವಾಗಿ ನಡೆದಿವೆ. ರಾಜ್ಯದ 1624 ಸಹಕಾರಿ ಸಂಸ್ಥೆಗಳಿಂದ 2105ಕ್ಕೂ ಹೆಚ್ಚು ಜನರಿಗೆ ಪ್ರಯೋಜನವಾಗಿದೆ.

ಈ ಕಾರ್ಯಕ್ರಮಗಳಲ್ಲಿ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಇನ್ನು ಕೆಲವು ಅಧ್ಯಕ್ಷರ ಭಾಗವಹಿಸುವಿಕೆಯನ್ನು ಗಮನಿಸಿದರೆ ಇದೊಂದು ಉತ್ತಮ ತರಬೇತಿ ಕಾರ್ಯಕ್ರಮ ಇದರಲ್ಲಿ ನಾವು ಭಾಗವಹಿಸಲೇ ಬೇಕು ಇಲ್ಲದಿದ್ದರೆ ನಮಗೆ ನಷ್ಟ ಎನ್ನುವ ಕಲ್ಪನೆ ಅವರಿಗೆ ಬಂದಿರುವುದು ಸಂಯುಕ್ತ ಸಹಕಾರಿಯ ಪ್ರಯತ್ನ ಸಾರ್ಥಕ ಎನ್ನುವ ಭಾವನೆ ಮೂಡಿಸಿದೆ.

ಈ ತರಬೇತಿ ಕಾರ್ಯಕ್ರಮಗಳಲ್ಲಿ ಪ್ರತಿನಿಧಿಗಳ ಭಾಗವಹಿಸುವಿಕೆಯ ಜೊತೆಗೆ ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ಸಹಕಾರಿ ಇಲಾಖೆಯ ಅಧಿಕಾರಿಗಳು, ಸಹಕಾರಿ ತಜ್ಞರು ಭಾಗವಹಿಸಿದ್ದಾರೆ. ಸಂಯುಕ್ತ ಸಹಕಾರಿಯ ಈ ಪ್ರಯತ್ನವನ್ನು ಶ್ಲಾಘಿಸಿದ್ದಾರೆ. ಇದರಿಂದಾಗಿ ಸೌಹಾರ್ದ ಸಹಕಾರಿ ಕ್ಷೇತ್ರ ತನ್ನ ವ್ಯಾಪಕತೆಯನ್ನು ಹೆಚ್ಚಿಸಿಕೊಂಡಿದೆ. ಕಾರ್ಯಚಟುವಟಿಕೆಗಳ ಮಾಹಿತಿ ಪ್ರಸಾರವಾಗಿದೆ. ಅಂಕಿಅಂಶಗಳ ಬಗ್ಗೆ ಮಾಹಿತಿ ಪ್ರಸಾರವಾಗಿದೆ. ಇಲಾಖಾಧಿಕಾರಿಗಳಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಸಕಾರಾತ್ಮಕ ಮನೋಭಾವ ಹೆಚ್ಚಿಸಲು ಸಾಧ್ಯವಾಗಿದೆ ಇದೊಂದು ಸಾಧನೆ ಎಂದು ಅರ್ಥೈಸಬಹುದಾಗಿದೆ.

ಎಲ್ಲದಕ್ಕೂ ಮಿಗಿಲಾಗಿ ರಾಜ್ಯದ ಸೌಹಾರ್ದ ಸಹಕಾರಿ ತರಬೇತಿದಾರರ ಪಡೆ ಸಿದ್ಧಪಡಿಸಲು ಸಂಯುಕ್ತ ಸಹಕಾರಿಯು ನಡೆಸಿದ ಪ್ರಯತ್ನ ಫಲಿಸಿದೆ. ರಾಜ್ಯದಲ್ಲಿ ಉತ್ತಮ ತರಬೇತಿದಾರರ ಪಡೆ ನಿರ್ಮಾಣವಾಗಿದೆ. ಇವೆಲ್ಲ ವಿಷಯಗಳನ್ನು ಗಮನಿಸಿದರೆ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಹೊಸ ದಿಕ್ಸೂಚಿ ಈ ತರಬೇತಿಯಾಗಲಿದೆ. ಮುಂಬರುವ ಎಲ್ಲ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ. ಪ್ರಗತಿಯ ಪಾಲುದಾರರಾಗಿ.

–ಎಸ್.ಆರ್. ಸತೀಶಚಂದ್ರ

# ಸಂಪಾದಕೀಯ



ವೃತ್ತಿಪರತೆ ಆಡಳಿತದ ಪ್ರಮುಖ ಅಂಗವಾಗಬೇಕು ಎಂಬುದು ಸಹಕಾರ ಕ್ಷೇತ್ರದ ಮಾನದಂಡವಾಗಬೇಕಿದೆ

97ನೇ ಸಂವಿಧಾನ ತಿದ್ದುಪಡಿಯ ಆಶಯ, ಸೌಹಾರ್ದ ಸಹಕಾರಿ ಕಾಯ್ದೆಯ ಆಶಯ, ಸಹಕಾರಿ ಕ್ಷೇತ್ರದ ಇತ್ತೀಚಿನ ವಿದ್ಯಮಾನಗಳು, ಸಹಕಾರಿ ಕ್ಷೇತ್ರದ ಸಾಧನೆಗಳು ಅದರ ಅಗತ್ಯತೆಯ ಮನಗಾಣುವಿಕೆ ಇವೆಲ್ಲ ಸಹಕಾರಿ ಕ್ಷೇತ್ರವನ್ನು ಬಲಪಡಿಸುವುದಕ್ಕಾಗಿ ಎಂಬುದು ನಿರ್ವಿವಾದ. ಎಲ್ಲರೂ ಒಪ್ಪಿಕೊಳ್ಳಬೇಕಾದ ವಿಷಯ. ಸ್ವಾಯತ್ತತೆ, ಸ್ವಯಂಆಡಳಿತ ಹಾಗೂ ಸ್ವಯಂನಿಯಂತ್ರಣದ (Democratic control) ಜೊತೆಗೆ ಸಹಕಾರಿಗಳನ್ನು ಹೆಚ್ಚು ವೃತ್ತಿಪರರನ್ನಾಗಿಸಿ ಹೆಚ್ಚಿನ ಜವಾಬ್ದಾರಿಯನ್ನು ವಹಿಸುವುದು ಮುಖ್ಯ ಉದ್ದೇಶವಾಗಿದೆ. (Professionalization & professional management) ವೃತ್ತಿಪರತೆ ಆಡಳಿತದ ಪ್ರಮುಖ ಅಂಗವಾಗಬೇಕು ಎಂಬುದು ಸಹಕಾರ ಕ್ಷೇತ್ರದ ಮಾನದಂಡವಾಗಬೇಕಿದೆ.

ವೃತ್ತಿಪರತೆಯನ್ನು ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ರೂಢಿಸುವ ಕಾರ್ಯದಲ್ಲಿ ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸಬೇಕಿದೆ. ಆಡಳಿತ ಮಂಡಳಿಯ ಸದಸ್ಯರು, ಅಧ್ಯಕ್ಷರು ಉಪಾಧ್ಯಕ್ಷರು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದಿಯಾಗಿ ಎಲ್ಲರಲ್ಲೂ ವೃತ್ತಿಪರತೆಯ ಬಗ್ಗೆ ಚಿಂತನೆಯ ಅಗತ್ಯತೆ ಇದೆ. ವೃತ್ತಿಪರತೆಯ ಅಳವಡಿಸಿಕೊಳ್ಳುವ ಮಾನಸಿಕತೆ ಬೆಳೆಸಿಕೊಳ್ಳುವ ಕಾಲ ಇದಾಗಿದೆ.

ಅತ್ಯಂತ ವೇಗದಲ್ಲಿ ಸಾಗುತ್ತಿರುವ ಇಂದಿನ ಜಗತ್ತಿನ ಆರ್ಥಿಕ ಚಟುವಟಿಕೆಗಳ ಕೇಂದ್ರ ಬಿಂದುವಾಗಿ ಸಹಕಾರಿ ಸಂಸ್ಥೆಗಳು ಗುರುತಿಸಿಕೊಳ್ಳುವ ಪ್ರಯತ್ನ ನಡೆಯಬೇಕಿದೆ. ಕರ್ನಾಟಕದ ಸಹಕಾರ ಕ್ಷೇತ್ರದ ಇತಿಹಾಸದಲ್ಲಿ ಮೈಲುಗಲ್ಲಾಗಿರುವ ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಸಕಾರಾತ್ಮಕ ಮನೋಭಾವ ಬೆಳೆಸುವಲ್ಲಿ ಸಂಯುಕ್ತ ಸಹಕಾರಿಯು ನಿರಂತರ ಪ್ರಯತ್ನ ನಡೆಸಿದೆ. ಜೊತೆಗೆ ವೃತ್ತಿಪರತೆಯನ್ನು ಬೆಳೆಸುವಲ್ಲಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಯ ಜೊತೆಗೆ ಕೈಗೂಡಿಸಿ, ಸಹಕರಿಸಿ.

ವೃತ್ತಿಪರತೆಯನ್ನು ಬೆಳೆಸಿ. ಅಭಿವೃದ್ಧಿಯನ್ನು ಸಾಧಿಸಿ. ಉತ್ತಮ ಆರ್ಥಿಕ ಸಂಘಟನೆಗಳಾಗಿ ಕಾರ್ಯನಿರ್ವಹಿಸಿ. ಸಹಕಾರಿ ಹಿರಿಮೆ ಹಾಗೂ ಗರಿಮೆಯನ್ನು ಆರ್ಥಿಕಲೋಕಕ್ಕೆ ಪರಿಚಯಿಸಿ.

## ಒಳ ಪುಟಗಳಲ್ಲಿ...


“ವಾರ್ಷಿಕ ಕ್ರಿಯಾ ಯೋಜನೆ ಸಭೆ” ವಿಶೇಷ ವರದಿ ........... 4

10 ದಿನಗಳ “ವ್ಯಕ್ತಿತ್ವ ವಿಕಸನ ತರಬೇತಿ” ಕಾರ್ಯಕ್ರಮ ......... 5

ನೀವು ಸಂಪನ್ಮೂಲ ವ್ಯಕ್ತಿಗಳಾಗಬೇಕೆ? ................................ 6

ಚಿಟ್ ಫಂಡ್ ಕಂಪನಿಗಳ ಅವ್ಯವಹಾರ : ಸಾರ್ವಜನಿಕರು ಎಚ್ಚರಿಕೆ ವಹಿಸುವುದು ಅಗತ್ಯ ........................................................ 7

ನೂತನ ಶಾಸಕರಿಗೆ ಹಾರ್ದಿಕ ಶುಭಾಶಯಗಳು .................. 8

ರಾಜ್ಯದಾದ್ಯಂತ ಹಮ್ಮಿಕೊಂಡಿದ್ದ ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ ತರಬೇತಿ ಅಭಿಯಾನ ಮುಕ್ತಾಯ ......... 9

“ಸೌಹಾರ್ದ ಸಹಕಾರಿ ಅಧಿನಿಯಮ ಹಾಗೂ ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ”ಯ ಕಾರ್ಯಾಗಾರ ........ 10

ವೃತ್ತಿ ನಿರತ ಮಹಿಳೆ ಆತ್ಮವಿಶ್ವಾಸದ ಗಣಿ ............................ 12

ವೆಬ್‌ಸೈಟ್ ಪರಿಚಯ ಮಾಲಿಕೆ : 11 ................................ 13

ಸುತ್ತೋಲೆ ...................................................................... 14

ಬ್ಯಾಂಕಿಂಗ್ ಒಂಬುಡ್ಸ್‌ಮನ್ ............................................ 16

ಶರಣಧರ್ಮ ಮತ್ತು ಸಹಕಾರಿ ತತ್ವಗಳು ............................ 17

ಸಹಕಾರಿ ಸಂಸ್ಥೆಗಳಲ್ಲಿ ವೃತ್ತಿಪರತೆ ................................ 18

ವ್ಯಕ್ತಿ ಪರಿಚಯ .............................................................. 20

# ಶ್ರೀ ಸರಸ್ವತಿ ಪತ್ತಿನ ಸೌಹಾರ್ದ ಸಹಕಾರಿ ನಿ., ದರ್ಬೆ, ಪುತ್ತೂರು. "ವಾರ್ಷಿಕ ಕ್ರಿಯಾ ಯೋಜನೆ ಸಭೆ" ವಿಶೇಷ ವರದಿ

ಮಡಿಕೇರಿಯಲ್ಲಿ ದಿ. 14-04-2013 ರಂದು "ಶ್ರೀ ಸರಸ್ವತಿ ಪತ್ತಿನ ಸೌಹಾರ್ದ ಸಹಕಾರಿ ನಿ., ದರ್ಬೆ" ಇದರ "ವಾರ್ಷಿಕ ಕ್ರಿಯಾ ಯೋಜನಾ ಸಭೆ-2013-14" ಕಾರ್ಯಕ್ರಮ ಜರುಗಿತು. ಆರ್.ಕೆ. ನಾಯಕ್, ನಿರ್ದೇಶಕರು, ಶ್ರೀ ಸರಸ್ವತಿ ಪತ್ತಿನ ಸೌಹಾರ್ದ ಸಹಕಾರಿ ನಿ., ದರ್ಬೆ ಇವರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ವೇದಿಕೆ ಮೇಲೆ ಶ್ರೀ ಎಸ್. ಆರ್. ಸತೀಶ್ಚಂದ್ರ, (ಅಧ್ಯಕ್ಷರು, ಶ್ರೀ ಸರಸ್ವತಿ ಪತ್ತಿನ ಸೌಹಾರ್ದ ಸಹಕಾರಿ ನಿ., ದರ್ಬೆ) ಶ್ರೀ ಸುನೀಲ ಬೋರ್ಕರ್, ಶ್ರೀ ಜಯರಾಮ್, ಶ್ರೀ ಸೂರ್ಯನಾರಾಯಣ ನಾಯಿಕ್, ಶ್ರೀ ಪದ್ಮನಾಭ ಬೋರ್ಕರ್ (ನಿರ್ದೇಶಕರು, ಶ್ರೀ ಸರಸ್ವತಿ ಪತ್ತಿನ ಸೌಹಾರ್ದ ಸಹಕಾರಿ ನಿ., ದರ್ಬೆ) ಮತ್ತು ಶ್ರೀ ವಸಂತ, ಜನರಲ್ ಮ್ಯಾನೇಜರ್ (ಶ್ರೀ ಸರಸ್ವತಿ ಪತ್ತಿನ ಸೌಹಾರ್ದ ಸಹಕಾರಿ ನಿ., ದರ್ಬೆ) ಹಾಗೂ ಇವರೊಂದಿಗೆ ಶ್ರೀ ಸುದೇಶ್ ನಾಯಕ್, ಅಧ್ಯಕ್ಷರು, ಹಂಸ ಚೈತನ್ಯ ಸೌಹಾರ್ದ ಕ್ರೇಡಿಟ್ ಸಹಕಾರಿ ನಿ., ಉಡುಪಿ. ಮತ್ತು ಶ್ರೀ ಸಂಜಯ ಕೋರಟಕರ, ವಿಭಾಗೀಯ ಅಧಿಕಾರಿ, ಕ.ರಾ.ಸೌ.ಸಂ.ಸ.ನಿ., ಗುಲಬರ್ಗಾ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಶ್ರೀ ಆರ್.ಕೆ. ನಾಯಕ್ ಇವರು ಧನಾತ್ಮಕ ಚಿಂತನೆಗಳು ಇದ್ದರೆ ಮಾತ್ರ ಒಂದು ಸಹಕಾರಿಯು ಉತ್ತಮವಾಗಿ ಬೆಳೆಯಲು ಸಾಧ್ಯವೆಂದು ಹೇಳಿದರು.

ಅದೇ ರೀತಿ ಶ್ರೀ ಸುದೇಶ್‌ನಾಯಕ್ ಇವರು "ಚಿಂತಿಸಿ, ನಿರ್ವಹಿಸಿ, ಬೆಳೆಸಿ" ಎಂಬ ಘೋಷಣೆಯನ್ನು ಹೊಂದಿದ್ದ "ಶ್ರೀ ಸರಸ್ವತಿ ಸೌಹಾರ್ದ ಸಹಕಾರಿಯು ಕರ್ನಾಟಕದ ಅತ್ಯುತ್ತಮ ಸಹಕಾರಿಗಳಲ್ಲಿ ಒಂದಾಗಿದೆ" ಎಂದು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಸನ್ಮಾನ್ಯ ಶ್ರೀ ಎಸ್.ಆರ್. ಸತೀಶ್ಚಂದ್ರ, ಅಧ್ಯಕ್ಷರು ಇವರು ತಮ್ಮ ಭಾಷಣದಲ್ಲಿ "ಯಾವ ವ್ಯಕ್ತಿ ಒಂದು ಸಹಕಾರಿಯನ್ನು ಹುಟ್ಟು ಹಾಕುತ್ತಾನೋ ಅವನೇ ಒಬ್ಬ ನಿಜವಾದ ಸಹಕಾರಿ", "ಗ್ರಾಹಕನನ್ನು ಸೇಳೆಯುವ, ತಿಳಿದುಕೊಳ್ಳುವ ಜಾಣ್ಮೆಯನ್ನು ಸಹಕಾರಿಯ ಪ್ರತಿಯೊಬ್ಬ ಸಿಬ್ಬಂದಿಯು ಹೊಂದಿರಬೇಕು", "ಒಬ್ಬ ವ್ಯಕ್ತಿಯು ಪ್ರತಿಜ್ಞೆ




ಮಾಡಿದರೆ ಗಾಂದಿಜಿ ಮತ್ತು ಒಬೇರಾಯ ಹಾಗೆ ಪ್ರತಿಜ್ಞೆ ಮಾಡಿ ಸಾಧಿಸಿ ತೋರಿಸಬೇಕು" ಎಂದು ಹೇಳಿದರು.

'ಕ್ರಿಯಾ ಯೋಜನೆ-2013-14' ಕಾರ್ಯದಲ್ಲಿ. ಇದರಲ್ಲಿ ಮೊದಲನೆಯದಾಗಿ ಸರಸ್ವತಿ ಸೌಹಾರ್ದ ಸಹಕಾರಿಯ 9 ಶಾಖೆಗಳ 70 ಸಿಬ್ಬಂದಿಗಳು ತಮ್ಮ ತಮ್ಮ ಪರಿಚಯವನ್ನು ಮಾಡಿಕೊಂಡು ತಮ್ಮ ಕಾರ್ಯಕ್ಷಮತೆಯ ಬಗ್ಗೆ ನೆರದಿದ್ದ ಅತಿಥಿ ಗಣ್ಯರಿಗೆ ಮಾಹಿತಿಯನ್ನು ನೀಡಿದರು. ನಂತರ ಶ್ರೀ ಜಯರಾಮ್, ಶ್ರೀ ಪದ್ಮನಾಭ್ ಬೋರ್ಕರ್, ಶ್ರೀ ಸುನೀಲ್ ಬೋರ್ಕರ್ ಮತ್ತು ಸೂರ್ಯನಾರಾಯಣ್ ನಾಯಕ್, ಶ್ರೀ ವಸಂತ ಇವರೆಲ್ಲರೊಂದಿಗೆ 9 ಶಾಖೆಗಳ ಸಿಬ್ಬಂದಿಗಳು ಸೇರಿ ತಮ್ಮ ತಮ್ಮ ಶಾಖೆಗಳ 2012-13ರ ಕಾರ್ಯಚಟುವಟಿಕೆಗಳ ಬಗ್ಗೆ ಸ್ಥೂಲವಾಗಿ ಚರ್ಚಿಸಿ ಸಮಾಲೋಚಿಸಿದರು.

ನಂತರ 2013-14ನೇ ಸಾಲಿನ ಕ್ರಿಯಾ ಯೋಜನೆ ಕುರಿತು ಹಾಗೂ 2013-14ನೇ ಸಾಲಿನ ಅಂದಾಜು ಬಜೆಟ್ ಮಂಡಿಸಲು ಪ್ರತಿ ಶಾಖೆಗೆ 45 ನಿಮಿಷ ಸಮಯಾವಕಾಶ ನೀಡಿದರು. ಎಲ್ಲಾ ಶಾಖೆಗಳು ಬೇರೆ ಬೇರೆಯಾಗಿ ಬೇರೆ ಬೇರೆ ಸ್ಥಳಗಳಲ್ಲಿ ಕುಳಿತು 2013-14 ನೇ ಸಾಲಿನ ಬಜೆಟ್ ಮತ್ತು ಕ್ರಿಯಾ ಯೋಜನೆ ಬಗ್ಗೆ ಗುಂಪಾಗಿ ಚರ್ಚಿಸಿದರು. ಪ್ರತಿ ಶಾಖೆಯ ಸಿಬ್ಬಂದಿಗಳು ತಮ್ಮ ಅನುಭವವನ್ನು ಶಾಖೆಯ ಮುಖ್ಯಸ್ಥರಾದ ಮು.ಕಾ.ನಿ. ರವರೊಂದಿಗೆ ಕ್ರಿಯಾ ಯೋಜನೆ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಮರುದಿನ ಶ್ರೀ ಬಿ.ಎ.ಮಹಾದೇವಪ್ಪ ಅವರು "ವೃತ್ತಿಪರತೆ ಮತ್ತು ಸಮಯ ನಿರ್ವಹಣೆ" ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಶಿವಕುಮಾರ್, ಪ್ರಾಂಶುಪಾಲರು, ಸಹಕಾರಿ ತರಬೇತಿ ಸಂಸ್ಥೆ, ಮಡಿಕೇರಿ ಇವರು ಅತಿಥಿಗಳಾಗಿ ಭಾಗವಹಿಸಿದ್ದರು. ಪ್ರತಿ ಶಾಖೆಯ ನಿರ್ದೇಶಕರುಗಳು ಸೇರಿ ತಮ್ಮ ಶಾಖೆಯ 2013-14ರ ಬಜೆಟ್ ಮತ್ತು ಕ್ರಿಯಾ ಯೋಜನೆ ಮಂಡಿಸಿದರು.

ಅಧ್ಯಕ್ಷೀಯ ಭಾಷಣದಲ್ಲಿ ಶ್ರೀ ಸತೀಶ್ಚಂದ್ರರವರು ಎಲ್ಲಾ ಸಿಬ್ಬಂದಿಗಳಿಗೆ ಪ್ರೋತ್ಸಾಹ ನೀಡಿ ಅವರ ಧೈರ್ಯ, ಸಾಮರ್ಥ್ಯಗಳಿಗೆ ಆಡಳಿತ ಮಂಡಳಿ ಬೆನ್ನೆಲುಬಾಗಿ ಇರುತ್ತದೆ ಎಂದು ತಿಳಿಸಿದರು. ಈ ಕಾರ್ಯಕ್ರಮದ ನಂತರ ಸಮಾರೋಪ ಕಾರ್ಯಕ್ರಮ ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು. ಇದೊಂದು ಮಾದರಿ ಹಾಗೂ ಅನುಕರಣೀಯ ಕಾರ್ಯಕ್ರಮವಾಗಿದೆ.

– ಸಂಜಯ ಕೋಟಕರ, ಗುಲಬರ್ಗಾ. ■

## ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ಬೆಂಗಳೂರಿನಲ್ಲಿ

# 2 ದಿನಗಳ "ಆಡಳಿತ ಪರಿಣಿತಿ ತರಬೇತಿ" ಕಾರ್ಯಕ್ರಮ

ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ 2 ದಿನಗಳ "ಆಡಳಿತ ಪರಿಣಿತಿ ತರಬೇತಿ" ಕಾರ್ಯಕ್ರಮ ಬೆಂಗಳೂರಿನಲ್ಲಿ ಮೇ 17, 18ಕ್ಕೆ ನಿಗಧಿಪಡಿಸಲಾಗಿದೆ.

'ಬೆಂಗಳೂರಿನ ಪ್ರಾದೇಶಿಕ ಸಹಕಾರಿ ಆಡಳಿತ ನಿರ್ವಹಣಾ ಸಂಸ್ಥೆ'ಯಲ್ಲಿ (RICM) ಪದ್ಮನಾಭ ನಗರದಲ್ಲಿ ದಿನಾಂಕ : 17,18, ಮೇ 2013 ರಂದು ಆಡಳಿತ ಪರಿಣಿತಿ ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

ತರಬೇತಿ ಅವಧಿಯಲ್ಲಿ ವಸತಿ,ಊಟ ಉಪಾಹಾರ ಕಾಫೀ, ಟೀ, ಅಧ್ಯಯನ ಸಾಹಿತ್ಯ, ಉತ್ತಮ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸಗಳನ್ನು ಸಂಯುಕ್ತ ಸಹಕಾರಿಯು ವ್ಯವಸ್ಥೆ ಮಾಡಿರುತ್ತದೆ.ಕೇವಲ 60 ಜನರಿಗೆ ಮಾತ್ರ ಅವಕಾಶ ವಿರುತ್ತದೆ. 60ಕ್ಕಿಂತ ಹೆಚ್ಚು ಸಂಖ್ಯೆ ನೋಂದಣಿಯಾದಲ್ಲಿ 2ನೇ ತಂಡ ಹಾಗೂ 3ನೇ ತಂಡಗಳಲ್ಲಿ ಪ್ರತ್ಯೇಕ ದಿನಾಂಕಗಳಂದು ತರಬೇತಿಗೆ ವ್ಯವಸ್ಥೆ ಮಾಡಲಾಗುವುದು.

ಈ ತರಬೇತಿಯಲ್ಲಿ ಭಾಗವಹಿಸಲು ಅಪೇಕ್ಷಿಸುವ ನಿರ್ದೇಶಕರು ದಿನಾಂಕ : 15/5/2013ರ ಒಳಗಾಗಿ ರೂ. 1000/– ತರಬೇತಿ ಶುಲ್ಕದೊಂದಿಗೆ ಕೂಡಲೇ ತಮ್ಮ ಸಂಸ್ಥೆಯ ನಿರ್ದೇಶಕರ ಹೆಸರನ್ನು ನೋಂದಾಯಿಸಲು ಕೋರಿದೆ.

## ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದಲ್ಲಿ

# 10 ದಿನಗಳ "ವ್ಯಕ್ತಿತ್ವ ವಿಕಸನ ತರಬೇತಿ" ಕಾರ್ಯಕ್ರಮ

ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 9ನೇ ತಂಡದ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮವನ್ನು ಉತ್ತರ ಕನ್ನಡ ಜಿಲ್ಲೆಯ ಉತ್ತಮ ನೈಸರ್ಗಿಕ ಹಾಗೂ ಶೈಕ್ಷಣಿಕ ಪರಿಸರದಲ್ಲಿ ದಿನಾಂಕ 30/5/2013 ರಿಂದ 8/6/2013ರವರೆಗೆ ನಡೆಸಲು ಉದ್ದೇಶಿಸಿದೆ. ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಈ ಕಾರ್ಯಕ್ರಮದ ಪ್ರಯೋಜನ ಪಡೆಯಲು ಕೋರಿದೆ.

**ವಿವರಗಳು :**

ಕಾರ್ಯಕ್ರಮದ ದಿನಾಂಕ ಹಾಗೂ ಅವಧಿ : 30/5/2013 ರಿಂದ 8/6/2013ರವರೆಗೆ ಹತ್ತು ದಿನಗಳು.

**ಕಾರ್ಯಕ್ರದ ಸ್ಥಳ** : ವಿಳಾಸ – ಸ್ನೇಹಸಾಗರ ರೆಸಿಡೆನ್ಸಿಯಲ್ ಸ್ಕೂಲ್, ವಿದ್ಯಾನಿಕೇತನ ಇಡಗುಂದಿ 581337, ಯಲ್ಲಾಪುರ, ಉತ್ತರಕನ್ನಡ ಜಿಲ್ಲೆ (ಯಲ್ಲಪುರದಿಂದ 8.ಕಿ.ಮಿ.ಹುಬ್ಬಳ್ಳಿ – ಕಾರವಾರ ರಸ್ತೆ)

**ತರಬೇತಿ ಶುಲ್ಕ** : ರೂ.5000/–

**ತರಬೇತಿ ವ್ಯವಸ್ಥೆ** : ವಸತಿ, ಬೆಳಿಗ್ಗೆ ಕಾಫೀ, ತಿಂಡಿ, ಮಧ್ಯಾಹ್ನ ಹಾಗೂ ರಾತ್ರಿ ಊಟ ಸಂಜೆ ಕಾಫೀ ಹಾಗೂ ಲಘು ಉಪಹಾರ.

ಅಧ್ಯಯನ ಸಾಹಿತ್ಯ, ಉತ್ತಮ ಸಂಪನ್ಮೂಲ ವ್ಯಕ್ತಿಗಳಿಂದ ಉತ್ತಮ ವಿಷಯಗಳ ಬಗ್ಗೆ ಉಪನ್ಯಾಸಗಳು, ಯೋಗ ಶಿಬಿರ, ಆರೋಗ್ಯ ತಪಾಸಣೆ, ಅಧ್ಯಯನ ಪ್ರವಾಸ, ಪ್ರಾಯೋಗಿಕಗಳು ಹಾಗೂ ವ್ಯಕ್ತಿತ್ವ ವಿಕಸನದ ಪೂರಕ ವಿಷಯಗಳು. ಮಹಿಳೆಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ಇರುತ್ತದೆ. ಲಭ್ಯವಿರುವ ಸೀಟುಗಳು 50 ಮಾತ್ರ. ಮೊದಲು ಬಂದವರಿಗೆ ಮೊದಲಾದ್ಯತೆ. ತರಬೇತಿ ಶುಲ್ಕ ಪಾವತಿಸಿ ಹೆಸರು ನೋಂದಾಯಿಸಲು ಕೊನೆಯ ದಿನಾಂಕ : 20/5/2013. ಹೆಚ್ಚಿನ ಮಾಹಿತಿಗಾಗಿ www.souhardha.com ಭೇಟಿ ನೀಡಿ ಹಾಗೂ ಕಛೇರಿ ಸಂಪರ್ಕಿಸಿ.

## ಸಂವಿಧಾನ 97ನೇ ತಿದ್ದುಪಡಿ : ಗುಜರಾತ್ ಉಚ್ಚನ್ಯಾಯಾಲಯದ ಮಹತ್ವದ ತೀರ್ಪು



ಗುಜರಾತ್ ಉಚ್ಚನ್ಯಾಯಲಯವು ರಾಜೇಂದ್ರ ಶಹಾ ವಿರುದ್ಧ ಯೂನಿಯನ್ ಆಫ್ ಇಂಡಿಯಾ ಮತ್ತು ಇತರರು ಪ್ರಕರಣದಲ್ಲಿ ಮುಖ್ಯ ನ್ಯಾಯಮೂರ್ತಿ ಶ್ರೀ ಭಾಸ್ಕರ್ ಭಟ್ಟಾಚಾರ್ಯ ಮತ್ತು ಶ್ರೀ ಜೆ.ವಿ. ಪರಡಿವಾಲ ಇವರನ್ನೊಳಗೊಂಡ ಪೀಠವು ಸಂವಿಧಾನದ 97ನೇ ತಿದ್ದುಪಡಿಯಲ್ಲಿ ಅನುಚ್ಛೇದ 19(1)(ಜೆ) ಮತ್ತು ಅನುಚ್ಛೇದ 43 ಬಿಗೆ ಮಾಡಲಾದ ತಿದ್ದುಪಡಿಯನ್ನು ಹೊರತು ಪಡಿಸಿ ಉಳಿದ ಅನುಚ್ಛೇದಗಳಿಗೆ ಮಾಡಲಾದ ತಿದ್ದುಪಡಿ ಅಂದರೆ 243ಜೆಡ್‌ಹೆಚ್ ರಿಂದ 243ಜೆಡ್‌ಟಿಯವರೆಗಿನ ತಿದ್ದುಪಡಿ ಯನ್ನು ಅನೂರ್ಜಿತಗೊಳಿಸಿದೆ. ನ್ಯಾಯ ಪೀಠವು 'ಸಹಕಾರ' ವಿಷಯವು ರಾಜ್ಯಪಟ್ಟಿಯಲ್ಲಿ ಬರುವ ವಿಷಯವಾದ ಕಾರಣ ಸದರಿ ವಿಷಯದ ಕುರಿತು ರಾಜ್ಯ ಸರ್ಕಾರ ಮಾತ್ರ ಕಾನೂನು ರೂಪಿಸಬಹುದಾಗಿರುತ್ತದೆ. ಕೇಂದ್ರ ಸರ್ಕಾರವು 'ಸಹಕಾರ' ವಿಷಯದಲ್ಲಿ ಹಸ್ತಕ್ಷೇಪ ಮಾಡುವುದು ರಾಜ್ಯದ ಹಕ್ಕನ್ನು ಅತಿಕ್ರಮಿಸಿದ್ದಂತಾಗುತ್ತದೆಂದು ಅಭಿಪ್ರಾಯ ಪಟ್ಟಿದೆ. ನ್ಯಾಯ ಪೀಠವು ತೀರ್ಪಿನಲ್ಲಿ ಕೇಂದ್ರ ಸರ್ಕಾರವು ಸಂವಿಧಾನ ತಿದ್ದುಪಡಿಯನ್ನು ಮಾಡುವಾಗ ಅನುಚ್ಛೇದ 368ರಲ್ಲಿ ತಿಳಿಸಲಾಗಿರುವ ಪ್ರಕ್ರಿಯೆಯನ್ನು ಅನುಸರಿಸಿರುವುದಿಲ್ಲವೆಂದು ಮುಂಬೈ ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

ಇವೆಲ್ಲವೂ ಸಹಕಾರಿಗಳ ಗಮನಕ್ಕೆ ಹಾಗೂ ಮಾಹಿತಿಗಾಗಿ ನೀಡಲಾಗಿದೆ.

## ರಾಜ್ಯ ಸಹಕಾರ ಚುನಾವಣಾ ಆಯೋಗ ಅಸ್ತಿತ್ವಕ್ಕೆ

97ನೇ ಸಂವಿಧಾನ ತಿದ್ದುಪಡಿಯಿಂದಾಗಿ ರಾಜ್ಯದ ಸಹಕಾರ ಸಂಘಗಳ ಕಾಯ್ದೆ ಹಾಗೂ ಸೌಹಾರ್ದ ಸಹಕಾರಿ ಕಾಯ್ದೆಗಳಿಗೆ ತಿದ್ದುಪಡಿಗಳು ಜಾರಿಗೆ ಬಂದುದರ ಪರಿಣಾಮವಾಗಿ ರಾಜ್ಯ ಸಹಕಾರ ಚುನಾವಣಾ ಆಯೋಗ ಅಸ್ತಿತ್ವಕ್ಕೆ ಬಂದಿದೆ. ವಿಳಾಸ ಈ ರೀತಿ ಇದೆ.

ರಾಜ್ಯ ಸಹಕಾರ ಚುನಾವಣಾ ಆಯುಕ್ತರು ಕೊಠಡಿ ಸಂ.241 & 243. 2ನೇ ಮಹಡಿ ವಿಧಾನಸೌಧ, ಬೆಂಗಳೂರು–01.

ರಾಜ್ಯದ ಹಿರಿಯ ಐ.ಎ.ಎಸ್. ಅಧಿಕಾರಿ ಶ್ರೀ ಎನ್.ಸಿ.ಮುನಿಯಪ್ಪ ಸಹಕಾರ ಚುನಾವಣಾ ಆಯುಕ್ತರಾಗಿ ನೇಮಕ ಗೊಂಡಿರುತ್ತಾರೆ. ದೂ.ಸಂ. 220 33026, 22353112.ರಾಜ್ಯದ ಸೌಹಾರ್ದ ಸಹಕಾರಿಗಳು ತಮ್ಮ ಸಹಕಾರಿಗಳಿಗೆ ಚುನಾವಣೆಯನ್ನು ನಡೆಸುವುದಕ್ಕಾಗಿ ಅಗತ್ಯ ಮಾಹಿತಿ ಪಡೆಯಲು ಸದರಿಯವರನ್ನು ಸಂಪರ್ಕಿಸಲು ಸೂಚಿಸಿದೆ.

## 61.11 ಲಕ್ಷರೂ ನಿವ್ವಳ ಲಾಭ

ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ 61.11 ಲಕ್ಷರೂ ನಿವ್ವಳ ಲಾಭ ಗಳಿಸಿದೆ. ಕಳೆದ 8 ವರುಷಗಳಿಂದ ಸತತವಾಗಿ 0% ಎನ್.ಪಿ.ಎ. (ಅನುತ್ಪಾದಕ ಆಸ್ತಿ)ಯನ್ನು ಕಾಯ್ದಿರಿಸಿಕೊಂಡು ಬಂದಿದೆ.

## ಶೇರು ಹಣ ಮರುಪಾವತಿ

ಸಹಕಾರ ಸಂಘಗಳ ಜಂಟಿ ನಿಬಂಧಕರು ಗುಲ್ಬರ್ಗಾ ಪ್ರಾಂತ ರಾಯಚೂರು ರಾಜಶ್ರೀ ಭೀ.ಅಗಸರ್ ರವರು ಮಾರ್ಚ್ ರಂದು ನಿಯೋಜಿತ ದಿ ಡೆಕ್ಕನ್ ವಿವಿಧೋದ್ದೇಶ ಸೌಹಾರ್ದ ಸಹಕಾರಿ, ಕೇಂದ್ರ ಕಛೇರಿ ಬೀದರ ಇದರಲ್ಲಿ ಸಂಗ್ರಹಿಸಿರುವ 27 ಜನ ಸದಸ್ಯರ ಶೇರು ಹಣವನ್ನು ಸಂಬಂಧಿಸಿದವರಿಗೆ ಸಹಕಾರ ಸಂಘಗಳ ಉಪ ನಿಬಂಧಕರು ಬೀದರ ಇವರ ಸಮಕ್ಷಮದಲ್ಲಿ ನಿಯಮಾನುಸಾರ ಶೇರು ಹಣವನ್ನು ಮರುಪಾವತಿಸಲು ಅನುಮತಿಸಿರುತ್ತಾರೆ.

# ನೀವು ಸಂಪನ್ಮೂಲ ವ್ಯಕ್ತಿಗಳಾಗಬೇಕೆ ? ಹಾಗಾದರೆ ಬನ್ನಿ ನಮ್ಮೊಡನೆ ಕೈ ಜೋಡಿಸಿ

ರಾಜ್ಯದ ಸಹಕಾರಿ ಚಳುವಳಿಯ ಆರೋಗ್ಯಕರ ಬೆಳವಣಿಗೆ ಹಾಗೂ ಅಭಿವೃದ್ಧಿಯ ದೃಷ್ಟಿಯಿಂದ ರಾಜ್ಯದ ಸಹಕಾರಿ ತರಬೇತಿ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಸಲುವಾಗಿ ಸಂಯುಕ್ತ ಸಹಕಾರಿಯು ರಾಜ್ಯದಾದ್ಯಂತ ಕನಿಷ್ಟ 100 ಜನ ಉತ್ತಮ ತರಬೇತಿದಾರರ ತಂಡವನ್ನು ರಚಿಸಲು ಉದ್ದೇಶಿಸಿದೆ.

ಆದ್ದರಿಂದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ನಡೆಸುತ್ತಿರುವ ಅಥವಾ ರಾಜ್ಯದ ಇನ್ನಾವುದೆ ಸಹಕಾರಿ ಸಂಸ್ಥೆಯು ನಡೆಸುವ ಯಾವುದೇ ತರಬೇತಿ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಲು ತಾವು ಅಪೇಕ್ಷಿಸುವಿರಾದರೆ ತಮ್ಮ ಹೆಸರು, ವಿಳಾಸ, ದೂರವಾಣಿ ಸಂಖ್ಯೆ, ಇ–ಮೇಲ್ ಐ.ಡಿ. ತಾವು ಪರಿಣತಿ ಪಡೆದಿರುವ ವಿಷಯ, ತಾವು ಕೆಲಸ ನಿರ್ವಹಿಸಿದ ಸಂಸ್ಥೆಗಳ ಹೆಸರು, ತಮ್ಮ ಅನುಭವ ಇತ್ಯಾದಿ ವಿವರಗಳನ್ನು ಸಂಯುಕ್ತ ಸಹಕಾರಿಗೆ ಕಳುಹಿಸಿಕೊಡಲು ಕೋರಿದೆ. ಹಾಗೂ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಲು ಕೋರಿದೆ.



### ವಾರ್ಷಿಕ ಮಾಹಿತಿ ಸಲ್ಲಿಸಲು ಕೊನೆಯ ದಿನಾಂಕ : ಮೇ 20

ಪ್ರತಿಯೊಂದು ಸಹಕಾರಿಯು ತನ್ನ ವಾರ್ಷಿಕ ಆರ್ಥಿಕ ಅಂತ್ಯದ ಅಂಕಿಅಂಶಗಳನ್ನು ಲಗತ್ತಿಸಿದ ನಮೂನೆಯಲ್ಲಿ ಕಳುಹಿಸಲು ಸಂಯುಕ್ತ ಸಹಕಾರಿಯು ದಿನಾಂಕ 25.4.2013 ರಂದು ಸುತ್ತೋಲೆಯನ್ನು ಕಳುಹಿಸಿದೆ. ಎಲ್ಲ ಸಹಕಾರಿಗಳು ಮೇ 20ರ ಒಳಗಾಗಿ ಸದರಿ ಮಾಹಿತಿಯನ್ನು ಕಳುಹಿಸಲು ಸೂಚಿಸಿದೆ.

### ಸಂಯುಕ್ತ ಸಹಕಾರಿಯ ಗುಲ್ಬರ್ಗಾ ವಿಭಾಗೀಯ ಕಚೇರಿ ಸ್ಥಳಾಂತರ :

**ನೂತನ ವಿಳಾಸ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ವಿಭಾಗೀಯ ಕಚೇರಿ : ಗುಲ್ಬರ್ಗಾ ನಂ 1–4/3 ಎ ಸಂಜೆವರಾವ್ ಬಡಾವಣೆ, ಕೆ.ಎಸ್. ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಗುಲ್ಬರ್ಗಾ – 585102. ದೂ. 08472–270222, ಮೊ. 9900990268

### ಶಾಖೆ ಪ್ರಾರಂಭಿಸಲು ಮಾನದಂಡಗಳ ಕರಡು ಸಿದ್ಧ; ಆಕ್ಷೇಪ ಸಲ್ಲಿಸಲು ಕಡೆಯ ದಿನಾಂಕ : 20 ಮೇ

ರಾಜ್ಯದ ಸೌಹಾರ್ದ ಸಹಕಾರಿಗಳು ತಮ್ಮ ಶಾಖೆಯನ್ನು ಪ್ರಾರಂಭಿಸಲು ಸಂಯುಕ್ತ ಸಹಕಾರಿಯ ಪೂರ್ವಾನುಮತಿ ಪಡೆಯುವುದು ಅಗತ್ಯವೆಂದು ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ ಕಲಂ23(ಎ) ನಲ್ಲಿ ತಿಳಿಸಲಾಗಿದೆ. ಇದಕ್ಕೆ ಸಂಬಂದಿಸಿದಂತೆ ಮಾನದಂಡಗಳನ್ನು ರಚಿಸುವ ಅಗತ್ಯತೆಯನ್ನು ಕಂಡುಕೊಂಡ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ಸೌಹಾರ್ದ ಸಹಕಾರಿಗಳು ತಮ್ಮ ಶಾಖೆಯನ್ನು ತೆರೆಯುವುದಕ್ಕಾಗಿ ಮಾನ ದಂಡಗಳನ್ನು ರಚಿಸಲು ಉದ್ದೇಶಿಸಿದ್ದಾರೆ. ದಿನಾಂಕ : 20–4–2013 ರಂದು ನಡೆದ ಆಡಳಿತ ಮಂಡಲಿ ಸಭೆಯಲ್ಲಿ ಕರಡು ಮಾನದಂಡಗಳು ಅನುಮೊದನೆಯಾಗಿರುವುದನ್ನು ಸೌಹಾರ್ದ ಸಹಕಾರಿಗಳಿಗೆ ಕಳುಹಿಸಿ ಸಹಕಾರಿಯ ಆಕ್ಷೇಪಣೆ ಗಳನ್ನು ಪಡೆಯಲು ತಿರ್ಮಾನಿಸಿದೆ. ಅದರಂತೆ ಶಾಖೆ ಪ್ರಾರಂಭಿಸಲು ಮಾನದಂಡಗಳ ಕರಡು ಪ್ರತಿಯನ್ನು ದಿನಾಂಕ : 25.04.2013 ರಂದು ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಕಳುಹಿಸಿದೆ. ಸಂಯುಕ್ತ ಸಹಕಾರಿಗಳು ತಮ್ಮ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ದಿನಾಂಕ 20/5/2013 ರ ಒಳಗಾಗಿ ಸಂಯುಕ್ತ ಸಹಕಾರಿಗೆ ತಿಳಿಸುವುದು.

# ಚಿಟ್ ಫಂಡ್ ಕಂಪನಿಗಳ ಅವ್ಯವಹಾರ : ಸಾರ್ವಜನಿಕರು ಎಚ್ಚರಿಕೆ ವಹಿಸುವುದು ಅಗತ್ಯ



ಕೊಲ್ಕತ್ತಾ ಮೂಲದ ಶಾರದಾ ಸಮೂಹ ಸಂಸ್ಥೆಗಳ ನಡೆಸುತ್ತಿರುವ ಚಿಟ್ ಫಂಡ ವ್ಯವಹಾರದಲ್ಲಿ ಸಾವಿರಾರು ಕೋಟಿ ರೂಪಾಯಿಗಳ ದುರ್ಬಳಕೆಯಾಗಿರುವ ಕುರಿತು ಬಂದಿರುವ ದೂರಿನ ಕುರಿತು ಕೇಂದ್ರ ಸರಕಾರವು ನಿರ್ಧರಿಸಿರುವುದನ್ನು ಹಾಗೂ ಇಂತಹ ಕಂಪನಿಗಳ ಅವ್ಯವಹಾರ ತಡೆಗಟ್ಟುವುದಕ್ಕಾಗಿ "ಗಂಭೀರ ಅವ್ಯವಹಾರ ತನಿಖಾ ಕಚೇರಿಯನ್ನು ಸ್ಥಾಪಿಸಲುಆದೇಶಿಸಿರುವುದನ್ನು ಸಾರ್ವಜನಿಕರು ಗಮನಿಸಬಹುದಾಗಿದೆ.

ಇಂತಹ ಕಂಪನಿಗಳನ್ನು ಸಾರ್ವಜನಿಕರಿಂದ ಚಿಟ್ ಫಂಡ್ ಮೂಲಕ ಸಂಗ್ರಹಿಸಿದ ಹಣವನ್ನು ದುರುಪಯೋಗ ಮಾಡಿ ಕಂಪನಿಗಳನ್ನು ದಿವಾಳಿಯತ್ತ ತಂದು ಸಾರ್ವಜನಿಕರಿಗೆ ಮೋಸಮಾಡುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಸಾರ್ವಜನಿಕರ ಹೂಡಿಕೆಗಳನ್ನು ರಕ್ಷಿಸುವ ದೃಷ್ಟಿಯಿಂದ ಕೇಂದ್ರ ಸರಕಾರ ಈ ಕ್ರಮ ಕೈಗೊಂಡಿದೆ. ಇದು ಸ್ವಾಗತಾರ್ಹ ಅಗತ್ಯ ಕ್ರಮವಾಗಿದೆ. (ಸೆಬಿ 'ಹೂಡಿಕೆ ಮಾರುಕಟ್ಟೆ ನಿಯಂತ್ರಣ ಸಂಸ್ಥೆಯವರೂ ಸಹ ಜನರಿಂದ ಸಂಗ್ರಹಿಸಿರುವ ಹಣ ವಾಪಸ್ ಮಾಡಬೇಕೆಂದು ಆದೇಶ ಹೊರಡಿಸಿದೆ).

ಸಾರ್ವಜನಿಕರ ಹಿತಾಸಕ್ತಿಯನ್ನು ಕಾಪಾಡಲು ಸರಕಾರಗಳಿವೆ. ಕೇಂದ್ರ ಸರಕಾರದ ಹಣಕಾಸು ಇಲಾಖೆ ರಿಸರ್ವಬ್ಯಾಂಕ ಆಫ್ ಇಂಡಿಯ ಹಾಗೂ ಸೆಬಿ ಮುಂತಾದವುಗಳು ಇವೆ. ಆದಾಗ್ಯೂ ಸಾರ್ವಜನಿಕರು ಮೋಸಹೊಗಿರುವ ಉದಾಹರಣೆಗಳು ಸಾಕಷ್ಟಿವೆ ಆಗಾಗ್ಗೆ ಇಂತಹ ಕಂಪನಿಗಳು ಹುಟ್ಟಿಕೊಂಡು ಅಮಾಯಕರನ್ನು ಮೋಸಗೊಳಿಸುತ್ತಲೇ ಇವೆ. ಇಂತಹ ಸಂದರ್ಭಗಳಲ್ಲಿ ಅಪರಾಧ ರುಜುವಾತಾಗಿ ಸಾರ್ವಜನಿಕರಿಗೆ ಅವರು ಹೂಡಿಕೆಗಳು ವಾಪಸ್ಸು ಬರಲು ಬಹಳ ಕಷ್ಟಪಡಬೇಕಾಗುತ್ತದೆ. ಆದ್ದರಿಂದ ಸಾರ್ವಜನಿಕರು ಹಣಕಾಸಿನ ವ್ಯವಹಾರದಲ್ಲಿ ಯಾರದೂ ಮಾತಿಗೆ ಅಥವಾ ಆಮಿಷಗಳಿಗೆ ಬಲಿಯಾಗಿ ಕಂಪನಿಗಳ ಪೂರ್ವಾಪರಗಳನ್ನು ಅಧ್ಯಯನಮಾಡದೇ ಚಿಟ್ ಫಂಡ ವ್ಯವಹಾರಗಳಲ್ಲಿ ತೊಡಗಿಸಿಕೊಳ್ಳುವ ಮುನ್ನ ಸಾಕಷ್ಟು ಜಾಗ್ರತೆ ವಹಿಸಬೇಕು ಅಥವಾ ಇವುಗಳಿಂದ ದೂರವಿರಬೇಕೆಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

**ರಾಜ್ಯದಲ್ಲಿ ಅನೇಕ ಸಮೂಹ ಸಂಸ್ಥೆಗಳು ಚಿಟ್ ಫಂಡ್ ವ್ಯವಹಾರ ನಡೆಸುತ್ತಾ ಸೌಹಾರ್ದ ಸಹಕಾರಿಗಳ ಹೆಸರನ್ನು ಕೆಡಿಸುತ್ತಿರುವುದು ಕೂಡ ಕಂಡು ಬಂದಿದ್ದು, ಸೌಹಾರ್ದ ಸಹಕಾರಿಗಳ ಸದಸ್ಯರು ಅಂತಹ ಸಮೂಹ ಸಂಸ್ಥೆಗಳಲ್ಲಿ ಹಣ ತೊಡಗಿಸುವಾಗ ಎಚ್ಚರಿಕೆ ವಹಿಸಬೇಕಿದೆ.**

## ಪ್ರಗತಿಪಥದಲ್ಲಿ ಶ್ರೀ ಬೀರೇಶ್ವರ ಸೌಹಾರ್ದ ಸಹಕಾರಿ

ಕರ್ನಾಟಕ ಮಹಾರಾಷ್ಟ್ರಾ ಗಡಿಯಂಚಿನ ಭಾಗದಲ್ಲಿರುವ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಎಕ್ಸಂಬಾದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಬೀರೇಶ್ವರ ಸೌಹಾರ್ದ ಕ್ರೆಡಿಟ್ ಸಹಕಾರಿಯು ಪ್ರಗತಿ ಪಥದಲ್ಲಿ ಸಾಗುತ್ತ ಗ್ರಾಮೀಣ ಜನರ ಆರ್ಥಿಕ ಅಭಿವೃದ್ಧಿಯ ಸಾಧನವಾಗಿ ಕಾರ್ಯನಿರ್ವಹಿಸುತ್ತಿದೆ.

ಈ ಸಂಸ್ಥೆಯಲ್ಲಿ 51,368 ಸದಸ್ಯರಿದ್ದು 5,41,12,800 ರೂಗಳ ಪಾಲು ಬಂಡವಾಳ ಇದೆ. 37737,77,313 ರೂಗಳ ಠೇವಣಿ ಯಿದೆ.298,71,87,447,77ರೂ.ಗಳನ್ನು ಸಾಲನೀಡಲಾಗಿದೆ. ರೂ 14,65,80,767.49 ಕಾಯ್ದಿಟ್ಟ ಹಾಗೂ ಇತರೆ ನಿಧಿಗಳು ಇವೆ. 408,31,67,653.77 ರೂಗಳ ದುಡಿಯುವ ಬಂಡವಾಳವಿದೆ. ರಾಜ್ಯದಾದ್ಯಂತ 75 ಶಾಖೆಗಳನ್ನು ಹೊಂದಿದೆ. ಪ್ರಸಕ್ತ ಸಾಲಿನಲ್ಲಿ 3,81,38,138.13 ರೂಗಳ ಲಾಭಗಳಿಸಿದೆ. ಅಧ್ಯಕ್ಷರು ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರೆಲ್ಲ ಸಹಕಾರಿಯ ಶ್ರೇಯಸ್ಸಿಗಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಸಹಕಾರಿಯಲ್ಲಿ ಅಧ್ಯಯನ ಮಾಡ ಬಹುದಾದ ಅನೇಕ ವೈಶಿಷ್ಟತೆಗಳಿವೆ. ಸಹಕಾರಿ ಗಳು ಒಂದು ಬಾರಿ ಈ ಸಹಕಾರಿಯನ್ನು ಭೇಟಿಮಾಡಿ ಸಹಕಾರಿಯ ಚಟುವಟಿಕೆಗಳನ್ನು ಅಧ್ಯಯನಮಾಡಬಹುದಾಗಿದೆ.





## ಬೀಳ್ಕೊಡುವ ಸಮಾರಂಭ


ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಶ್ರೀ ಬಸವರಾಜ ವಿ.ಹಾಗರಗಿ ಇವರು ದಿನಾಂಕ 31.03.2013 ರ ರಂದು ಬ್ಯಾಂಕಿನ ಸೇವೆಯಿಂದ ವಯೋನಿವೃತ್ತಿ ಹೊಂದಿದರು. 35 ವರ್ಷಗಳ ಸೇವೆ ಸಲ್ಲಿಸುವದರೊಂದಿಗೆ ಬ್ಯಾಂಕಿನ ಪ್ರಗತಿಗೆ ಅವರನ್ನು ಬ್ಯಾಂಕಿನ ನಿರ್ದೇಶಕ ಮಂಡಳಿ ಹಾಗೂ ಸಿಬ್ಬಂದಿ ಹಾರ್ದಿಕವಾಗಿ ಬೀಳ್ಕೊಟ್ಟರು. ಬ್ಯಾಂಕಿನ ಲಾಭಾಂಶ ರೂ.239.35 ಲಕ್ಷ ಗಳಿಸಿದೆ.

# ನೂತನ ವಿಧಾನಸಭೆಗೆ ಆಯ್ಕೆಯಾಗಿರುವ ಸಹಕಾರ ಕ್ಷೇತ್ರದ ಹಿರಿಯರಿಗೆ ಹಾಗೂ ಎಲ್ಲಾ ಶಾಸಕರಿಗೆ ಹಾರ್ದಿಕ ಶುಭಾಶಯಗಳು


**ಅಧ್ಯಕ್ಷರು, ಉಪಾಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಆಡಳಿತ ಮಂಡಳಿ,**
**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.**


ಶ್ರೀ ಜಿ.ಟಿ. ದೇವೇಗೌಡ


ಶ್ರೀ ಕೆ.ಹೆಚ್. ಪಾಟೀಲ್


ಶ್ರೀ ಆರ್.ವಿ. ದೇಶಪಾಂಡೆ



ಶ್ರೀ ಹೆಚ್.ಡಿ. ರೇವಣ್ಣ


ಶ್ರೀ ಉಮೇಶ್ ಕತ್ತಿ


ಶ್ರೀ ಗುರುಮಾದಪ್ಪ ನಾಗಮಾರಪಲ್ಲಿ


ಶ್ರೀ ಲಕ್ಷ್ಮಣ ಸವದಿ


ಶ್ರೀ ಕೆ.ಎನ್. ರಾಜಣ್ಣ


ಶ್ರೀ ವಾಸು


ಶ್ರೀ ಷಡಕ್ಷರಿ


ಶ್ರೀ ಶಿವಶಂಕರ್ ಹೆಚ್.ಎಸ್.


ಶ್ರೀ ಎಸ್.ಟಿ. ಸೋಮಶೇಖರ್


ಶ್ರೀ ಪ್ರಸನ್ನಕುಮಾರ್


ಶ್ರೀ ಶಿವಾನಂದ ಪಾಟೀಲ್

# ರಾಜ್ಯದಾದ್ಯಂತ ಹಮ್ಮಿಕೊಂಡಿದ್ದ ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ ತರಬೇತಿ ಅಭಿಯಾನ ಮುಕ್ತಾಯ

ರಾಜ್ಯದಾದ್ಯಂತ ದಿನಾಂಕ : 3/4/2013 ರಿಂದ ಹಮ್ಮಿಕೊಂಡಿದ್ದ 97ನೇ ಸಂವಿಧಾನ ತಿದ್ದುಪಡಿ, ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ ಆಧಾರಿತ ಸೌಹಾರ್ದ ಸಹಕಾರಿಗಳ ಉಪವಿಧಿಗಳ ತಿದ್ದುಪಡಿ ತರಬೇತಿ ಅಭಿಯಾನವು ದಿನಾಂಕ 18/4/2013 ರಂದು ಮುಕ್ತಾಯವಾಯಿತು.

ದಿನಾಂಕ 8/4/2013 ಸಿರಸಿ ಹಾಗೂ ಹುಬ್ಬಳ್ಳಿ 9/4/2013 ಕುಮಟಾ ಹಾಗೂ ಹಾವೇರಿಗಳಲ್ಲಿ ದಿನಾಂಕ 15/4/2013 ರಂದು ತುಮಕೂರು, ಬೆಳಗಾವಿ ಹಾಗೂ ಅಥಣಿಯಲ್ಲಿ, ದಿನಾಂಕ : 16/4/2013 ರಂದು ತುಮಕೂರು, ಬೆಳಗಾವಿ ಚಿಕ್ಕೋಡಿ ದಿನಾಂಕ : 17/4/3013ರಂದು ಚಿತ್ರದುರ್ಗ, ಗೋಕಾಕ ಹಾಗೂ ಸಂಕೇಶ್ವರಗಳಲ್ಲಿ, ದಿನಾಂಕ : 18/4/2013ರಂದು ದಾವಣಗೆರೆ, ಗೋಕಾಕ ಹಾಗೂ ಹುಕ್ಕೇರಿಗಳಲ್ಲಿ ಕಾರ್ಯಕ್ರಮಗಳು ನಡೆದವು. ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಪ್ರತಿನಿಧಿಗಳ ಪ್ರತಿಕ್ರಿಯೆ ಬಹಳ ಉತ್ತಮವಾಗಿತ್ತು.

| ಕ್ರ.ಸಂ. | ಸ್ಥಳ | ಸಹಕಾರಿಗಳು | ಪ್ರತಿನಿಧಿಗಳು |
|---|---|---|---|
| 8.4.2013 | ಹುಬ್ಬಳ್ಳಿ | 40 | 55 |
| 8.4.2013 | ಶಿರಸಿ | 23 | 40 |
| 9.4.2013 | ಹಾವೇರಿ | 33 | 50 |
| 9.4.2013 | ಕುಮಟಾ | 30 | 45 |
| 15.4.2013 | ತುಮಕೂರು | 43 | 51 |
| 15.4.2013 | ಬೆಳಗಾವಿ | 49 | 62 |
| 15.4.2013 | ಅಥಣಿ | 42 | 55 |
| 16.4.2013 | ತುಮಕೂರು | 34 | 43 |
| 16.4.2013 | ಬೆಳಗಾವಿ | 59 | 68 |
| 16.4.2013 | ಚಿಕ್ಕೋಡಿ | 52 | 68 |
| 17.4.2013 | ಚಿತ್ರದುರ್ಗ | 19 | 35 |
| 17.4.2013 | ಗೋಕಾಕ | 34 | 45 |
| 17.4.2013 | ಸಂಕೇಶ್ವರ | 61 | 80 |
| 18.4.2013 | ದಾವಣಗೆರೆ | 28 | 44 |
| 18.4.2013 | ಗೋಕಾಕ | 80 | 105 |
| 18.4.2013 | ಹುಕ್ಕೇರಿ | 61 | 80 |
| **ಒಟ್ಟು** | | **688** | **926** |



**ಹುಬ್ಬಳ್ಳಿ :** 97ನೇ ಸಂವಿಧಾನ ತಿದ್ದುಪಡಿ ಅನುಗುಣವಾಗಿ ಸೌಹಾರ್ದ ಸಹಕಾರಿ ಕಾನೂನು ತಿದ್ದುಪಡಿಯಾಗಿದ್ದು ಅದಕ್ಕೆ ತಕ್ಕಂತೆ ಪ್ರತಿಯೊಂದು ಸಹಕಾರಿ ಸಂಸ್ಥೆಗಳ ಉಪವಿಧಿಗಳಲ್ಲಿ ತಿದ್ದುಪಡಿ ಮಾಡುವ ಜವಾಬ್ದಾರಿ ಸಹಕಾರಿಗಳ ನಿರ್ದೇಶಕರುಗಳು ಹಾಗೂ ವ್ಯವಸ್ಥಾಪಕರಗಳ ಮೇಲೆ ಇರುತ್ತದೆ. ಇದಕ್ಕೆ ಕೂಡಲೇ ಅವಶ್ಯಕ ಕ್ರಮಗಳನ್ನು ಕೈಕೊಳ್ಳಬೇಕೆಂದು ದಿನಾಂಕ : 08-04-2013ರಂದು ನವನಗರದ ಕರ್ನಾಟಕ ವಾಣಿಜ್ಯ ಮತ್ತು ಉದ್ಯಮ ಸಂಸ್ಥೆಯ ಸಭಾಂಗಣದಲ್ಲಿ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರುರವರು ಧಾರವಾಡ ಹಾಗೂ ಗದಗ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಣಾದಿಕಾರಿಗಳಿಗಾಗಿ ಏರ್ಪಡಿಸಿದ ಕಾರ್ಯಾಗಾರದಲ್ಲಿ ಅದರ ಉದ್ಘಾಟನೆ ನೇರವೇರಿಸಿ ಸಂಧರ್ಬದಲ್ಲಿ ಧಾರವಾಡ ಜಿಲ್ಲೆಯ ಸಹಕಾರಿ ಸಂಘಗಳ ಉಪನಿಬಂಧಕರಾದ ಶ್ರೀ ವೀರಣ್ಣ ಬಿ. ಯಳ್ಳಳ್ಳಿಯವರು ಕರೆ ನೀಡಿದರು.

ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಧಾರವಾಡ ಜಿಲ್ಲೆಯ ಸಹಕಾರಿಯ ಲೆಕ್ಕಪರಿಶೋದನೆಯ ಉಪ ನಿರ್ದೇಶಕರಾದ ಶ್ರೀ ಎಸ್.ಶಿವಕುಮಾರರವರು ಕರ್ನಾಟಕ ಸರಕಾರವು ಸೌಹಾರ್ದ ಸಹಕಾರಿ ಹಾಗೂ ಇತರೇ ಸಹಕಾರಿ ಸಂಘಗಳಿಗೆ ತಿದ್ದುಪಡಿಯಾದ ಕಾನೂನು ಅನ್ವಯ ಮಾಡಿದ ವ್ಯವಸ್ಥೆಯ ಬಗ್ಗೆ ತಿಳಿಸಿ, ಬಡ ಜನರ ಆರ್ಥಿಕ ಏಳ್ಗೆಗಾಗಿ ಭಾರತ ಸರಕಾರವು ಸಹಕಾರಿ ಸಂಘಗಳನ್ನು ಸ್ಥಾಪಿಸಲು ಹಾಗೂ ಬೆಳೆಸಲು ಸಂವಿಧಾನದಲ್ಲಿ ಮೂಲಭೂತ ಅಧಿಕಾರವನ್ನು ಕಲ್ಪಿಸಿದ್ದು ಈ ಹಕ್ಕನ್ನು ಸಾರ್ವಜನಿಕರು ಸದುಪಯೋಗ ಮಾಡಿಕೊಳ್ಳಬೇಕು ಎಂದು ಅಧ್ಯಕ್ಷಿಯ ಭಾಷಣದಲ್ಲಿ ತಿಳಿಸಿದರು.

ಉಪವಿಧಿ ತಿದ್ದುಪಡಿ ಬಗ್ಗೆ ಮಾಹಿತಿಯನ್ನು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಶ್ರೀಕಾಂತ ಬರುವೆ ಹಾಗೂ ಸಂವಿಧಾನ ತಿದ್ದುಪಡಿ ಬಗ್ಗೆ ಶ್ರೀ ಬಿ. ರಾಜಶೇಖರ ಮಾಹಿತಿಯನ್ನು ನೀಡಿದ್ದರು. ಸ್ವಾಗತ ಹಾಗೂ ಪ್ರಾಸ್ತವಿಕ ಮತ್ತು ನಿರೂಪನೆಯನ್ನು ಬೆಳಗಾವಿ ವಿಭಾಗೀಯ ರಿಜಿನಲ್ ಮ್ಯಾನೇಜರ್ ಶ್ರೀ ಜಿ.ಎಸ್ ಟೋಪಣ್ಣನವರ್ ನೇರವೇರಿಸಿಕೊಟ್ಟರು.

# “ಸೌಹಾರ್ದ ಸಹಕಾರಿ ಅಧಿನಿಯಮ ಹಾಗೂ ಸೌಹಾರ್ದ





**ತುಮಕೂರು** : ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳಿಗಾಗಿ 97ನೇ ಸಂವಿಧಾನ ತಿದ್ದುಪಡಿಗನುಗುಣವಾಗಿ “ಸೌಹಾರ್ದ ಸಹಕಾರಿ ಅಧಿನಿಯಮ ಹಾಗೂ ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ”ಯ ಕಾರ್ಯಾಗಾರವನ್ನು ದಿನಾಂಕ 15 ಮತ್ತು 16 ಏಪ್ರಿಲ್ 2013ರಂದು ತುಮಕೂರಿನ ಸೇಕ್ರೆಡ್ ಹಾರ್ಟ್ ಸೌಹಾರ್ದ ಸಹಕಾರಿ ನಿ.,ದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಶ್ರೀ ಆರ್.ಎಸ್.ಹುಚ್ಚಾಚಾರಿ, ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ)ರವರು ಉದ್ಘಾಟಿಸಿ ಮಾತಾನಾಡುತ್ತ “ಕತ್ತಲೆಯಿಂದ ಬೆಳಕಿನೆಡೆಗೆ ನಡೆಯಲು ತರಬೇತಿ ಅಗತ್ಯ” ಎಂದು ತಿಳಿಸಿದರು.

ಕಾರ್ಯಾಗಾರದ ಅವಧಿಯಲ್ಲಿ “ಸಂವಿಧಾನ ತಿದ್ದುಪಡಿಗನುಗುಣವಾಗಿ ಸೌಹಾರ್ದ ಕಾಯ್ದೆ ತಿದ್ದುಪಡಿ ಮತ್ತು ಅವುಗಳ ಪರಿಣಾಮಗಳು” ವಿಷಯವನ್ನು ಶ್ರೀ ಆರ್.ಎಸ್.ಹುಚ್ಚಾಚಾರಿ ಹಾಗೂ “ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ ಅಂಶಗಳು” ವಿಷಯವನ್ನು ಶ್ರೀ ಬಿ.ವಿ.ರವೀಂದ್ರನಾಥ, ಮಾನ್ಯ ಸನ್ನದು ಲೆಕ್ಕಪರಿಶೋಧಕರು, ಸಾಗರ ಇವರುಗಳು ಉಪನ್ಯಾಸವನ್ನು ನೀಡಿದರು. ಸಹಕಾರ ಸಂಘಗಳ ಉಪನಿಬಂಧಕ ಶ್ರೀ ಎಚ್.ಬಾಲಶೇಖರ್ ಹಾಗೂ ತುಮಕೂರು ಜಿಲ್ಲಾ ಉಪ ನಿರ್ದೇಶಕರಾದ ಗಂಗಾಧರಯ್ಯನವರು ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿದರು.

ಮೊದಲನೆಯ ದಿನ 43 ಸೌಹಾರ್ದ ಸಹಕಾರಿಗಳಿಂದ 51 ಪ್ರತಿನಿಧಿಗಳು, ಎರಡನೆಯ ದಿನ 36 ಸೌಹಾರ್ದ ಸಹಕಾರಿಗಳಿಂದ 43 ಪ್ರತಿನಿಧಿಗಳು ಸೇರಿದಂತೆ ಒಟ್ಟು 79 ಸೌಹಾರ್ದ ಸಹಕಾರಿಗಳಿಂದ 94 ಪ್ರತಿನಿಧಿಗಳು ಭಾಗವಹಿಸಿ ಈ ಕಾರ್ಯಾಗಾರದ ಪ್ರಯೋಜನ ಪಡೆದುಕೊಂಡರು.

**ಚಿತ್ರದುರ್ಗ** : “ಸೌಹಾರ್ದ ಸಹಕಾರಿ ಅಧಿನಿಯಮ ಹಾಗೂ ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ” ಕಾರ್ಯಾಗಾರವನ್ನು ದಿನಾಂಕ 17 ಏಪ್ರಿಲ್ 2013ರಂದು ದಿ ಮರ್ಚೆಂಟ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಚಿತ್ರದುರ್ಗದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಮಾನ್ಯ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ.ರವೀಂದ್ರನಾಥರವರು ಉದ್ಘಾಟಿಸಿದರು. ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಶರಣಗೌಡ ಜಿ. ಪಾಟೀಲ್, ವ್ಯವಸ್ಥಾಪಕ ನಿರ್ದೇಶಕರು ವಹಿಸಿದ್ದರು. ಪ್ರಾಸ್ತಾವಿಕ ಮತ್ತು ಸ್ವಾಗತವನ್ನು ಶ್ರೀ ರಘುನಂದನ್, ಬೆಂಗಳೂರು ವಿಭಾಗಾಧಿಕಾರಿ, ಕರಾಸೌಸಂಸನಿ., ಇವರು ನಡೆಸಿಕೊಟ್ಟರು ಹಾಗೂ ಶ್ರೀ ಪಿ.ಎಲ್.ಸುರೇಶರಾಜು, ಉಪಾಧ್ಯಕ್ಷರು, ದಿ ಮರ್ಚೆಂಟ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಇವರು ವಂದಿಸಿದರು. ಪ್ರಾರ್ಥನೆಯನ್ನು ಶ್ರೀ ಹೆಚ್.ಆರ್.ಚಂದ್ರಿಕಾರವರು ಹಾಗೂ ನಿರೂಪಣೆಯನ್ನು ಶ್ರೀ ಜಿ.ವಿ.ಮುಕುಂದರಾವ್ ನಡೆಸಿಕೊಟ್ಟರು.

ಕಾರ್ಯಾಗಾರದ ಅವಧಿಯಲ್ಲಿ “ಸಂವಿಧಾನ ತಿದ್ದುಪಡಿಗನುಗುಣವಾಗಿ ಸೌಹಾರ್ದ ಕಾಯ್ದೆ ತಿದ್ದುಪಡಿ ಮತ್ತು ಅವುಗಳ ಪರಿಣಾಮಗಳು” ವಿಷಯವನ್ನು ಶ್ರೀ ಶರಣಗೌಡ ಜಿ. ಪಾಟೀಲ್, ವ್ಯವಸ್ಥಾಪಕ ನಿರ್ದೇಶಕರು, ಕರಾಸೌಸಂಸನಿ., ಹಾಗೂ “ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ ಅಂಶಗಳು” ವಿಷಯವನ್ನು ಶ್ರೀ ಬಿ.ವಿ.ರವೀಂದ್ರನಾಥ, ಮಾನ್ಯ ಸನ್ನದು ಲೆಕ್ಕಪರಿಶೋಧಕರು, ಸಾಗರ ಇವರುಗಳು ಉಪನ್ಯಾಸವನ್ನು ನೀಡಿದರು. 19 ಸೌಹಾರ್ದ ಸಹಕಾರಿಗಳಿಂದ 35 ಪ್ರತಿನಿಧಿಗಳು ಭಾಗವಹಿಸಿ ಈ ಕಾರ್ಯಾಗಾರದ ಪ್ರಯೋಜನ ಪಡೆದುಕೊಂಡರು.



# ಸಹಕಾರಿಗಳ ಉಪವಿಧಿ ತಿದ್ದುಪಡಿ"ಯ ಕಾರ್ಯಾಗಾರ



**ದಾವಣಗೆರೆ :** "ಸೌಹಾರ್ದ ಸಹಕಾರಿ ಅಧಿನಿಯಮ ಹಾಗೂ ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ" ಕಾರ್ಯಾಗಾರವನ್ನು ದಿನಾಂಕ 18 ಏಪ್ರಿಲ್ 2013ರಂದು ನ್ಯೂ ಅಪೂರ್ವ ಹೋಟೆಲ್, ದಾವಣಗೆರೆ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ವ್ಯವಸ್ಥಾಪಕರಾದ ಶ್ರೀ ಓಂಕಾರಪ್ಪನವರ್ ಉದ್ಘಾಟಿಸಿದರು. ಸಂಯುಕ್ತ ಸಹಕಾರಿಯ ದಾವಣಗೆರೆ ಜಿಲ್ಲಾ ನಿರ್ದೇಶಕರಾದ ಶ್ರೀ ನಂಜನಗೌಡ ಇವರು ಉಪಸ್ಥಿತರಿದ್ದರು.

ಪ್ರಾಸ್ತಾವಿಕ ಮತ್ತು ಸ್ವಾಗತವನ್ನು ಶ್ರೀ ರಘುನಂದನ್, ನಡೆಸಿಕೊಟ್ಟರು ಹಾಗೂ ಶ್ರೀ ಮಲ್ಲಪ್ಪ, ಜಿ.ಎಂ. ಸೌಹಾರ್ದ ಪತ್ತಿನ ಸಹಕಾರಿ ನಿ., ಇವರು ವಂದಿಸಿದರು.

**ಬೆಳಗಾವಿ :** 97ನೇ ಸಂವಿಧಾನ ತಿದ್ದುಪಡಿ ಅನುಗುಣವಾಗಿ ಸೌಹಾರ್ದ ಸಹಕಾರಿ ಕಾನೂನು ತಿದ್ದುಪಡಿಯಾಗಿದ್ದು ಇದರಿಂದ ಸೌಹಾರ್ದ ಸಹಕಾರಿಗಳು ಹೆಚ್ಚು ಪ್ರಮಾಣದಲ್ಲಿ ಹಾಗೂ ಸದೃಢವಾಗಿ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಬೆಳೆಯಲು ಸಾಧ್ಯ ಎಂದು ಉಪ ಪ್ರಧಾನ ವ್ಯವಸ್ಥಾಪಕರಾದ ಎಸ್.ಎನ್.ಬುರ್ಜಿ ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ವತಿಯಿಂದ ಬೆಳಗಾವಿ ತಾಲ್ಲೂಕಿನ ಸೌಹಾರ್ದ ಸಹಕಾರಿ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಇತ್ತೀಚೆಗೆ ನಗರದ ಕನ್ನಡ ಸಾಹಿತ್ಯ ಭವನದಲ್ಲಿ ಏರ್ಪಡಿಸಿದ ಕಾರ್ಯಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಸಂವಿಧಾನ ತಿದ್ದುಪಡಿಯಿಂದ ಸಹಕಾರಿಗಳ ಬೆಳವಣಿಗೆಗೆ ಹೊಸ ಆಯಾಮ ದೊರೆತಿರುತ್ತದೆ. ಈ ಸಂದರ್ಭದಲ್ಲಿ ಸಹಕಾರಿಗಳನ್ನು ಬದಲಾದ ಸೌಹಾರ್ದ ಸಹಕಾರಿ ಕಾನೂನು ಅನ್ವಯ ತಮ್ಮ ತಮ್ಮ ಉಪವಿಧಿಗಳನ್ನು ತಿದ್ದುಪಡಿ ಮಾಡಿಕೊಂಡು ತಮ್ಮ ಕಾರ್ಯಗಳನ್ನು ಮಾಡಬೇಕಾಗಿದೆ ಎಂದರು.

ತರಬೇತಿ ಶಿಬಿರಗಳು ಕೇವಲ ಕಾರ್ಯ ಕ್ರಮಗಳಾಗಿ ಕೆಲಸ



ಮಾಡದೇ ಸಹಕಾರಿ ಸಂಸ್ಥೆಗಳ ಬೆಳವಣಿಗೆ ದೃಷ್ಟಿಯಿಂದ ಸಾಧನಗಳಾಗಿ ಪರಿಣಾಮಿಸಬೇಕು ಎಂದು ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಕೋ-ಆಪ್ ತರಬೇತಿ ಸಂಸ್ಥೆಯ ಪ್ರಾಂಶುಪಾಲ ರಾದ ಶ್ರೀ ಎಲ್.ಸ್ವಾಮಿಗೌಡ ತಮ್ಮ ಬಾಷಣದಲ್ಲಿ ಹೇಳಿದರು. ಉಪವಿಧಿ ತಿದ್ದುಪಡಿ ಬಗ್ಗೆ ಮಾಹಿತಿಯನ್ನು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಪರಶಿವಮೂರ್ತಿ ಹಾಗೂ ಸಂವಿಧಾನ ತಿದ್ದುಪಡಿ ಬಗ್ಗೆ ಶ್ರೀ ಎಸ್.ಜಿ.ಜೋಷಿ ಮಾಹಿತಿಯನ್ನು ನೀಡಿದ್ದರು.



**ಬೆಳಗಾವಿ :** ಭಾರತ ಸರಕಾರವು 97ನೇ ಸಂವಿಧಾನ ತಿದ್ದುಪಡಿ ಮೂಲಕ ಆರ್ಥಿಕವಾಗಿ ಹಿಂದುಳಿದ ಮಧ್ಯಮ ಮತ್ತು ಕೆಳವರ್ಗದ ಜನರ ಆರ್ಥಿಕ ಏಳ್ಗಿಗೆಗಾಗಿ ಸಹಕಾರ ಸಂಸ್ಥೆಗಳ ಸ್ಥಾಪನೆ ಮತ್ತು ಬೆಳವಣಿಗೆ ಮಾಡಲು ಕ್ರಮ ಜರುಗಿಸಿದ್ದು ಇದರ ಅನುಗುಣವಾಗಿ ಎಲ್ಲ ರಾಜ್ಯ ಸರಕಾರಗಳಿಗೆ ಸಹಕಾರಿ ಕಾನೂನನ್ನು ಬದಲಾವಣೆ ಮಾಡಲು ತಿಳಿಸಿರುತ್ತಾರೆ ಇದರನ್ವಯ ಕರ್ನಾಟಕ ಸೌಹಾರ್ದ ಸಹಕಾರಿ ಕಾನೂನು ತಿದ್ದುಪಡಿಯಾಗಿರುತ್ತಾರೆ ಸಾರ್ವಜನಿಕರು ಸರಕಾರವು ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸಲು ಒದಗಿಸಿದ ಮೂಲಭೂತ ಹಕ್ಕನ್ನು ಸದುಪಯೋಗ ಮಾಡಿಕೊಳ್ಳಬೇಕೆಂದು ಎಂದು ನಿವೃತ್ತ ಅಪರ ನಿಬಂಧಕರು, ಸಹಕಾರ ಸಂಘಗಳ ಇಲಾಖೆ, ಬೆಂಗಳೂರುರಾದ ಶ್ರೀ ಸಿ.ಎನ್.ಪರಶಿವಮೂರ್ತಿಯವರು ಬೆಳಗಾವಿ ಮತ್ತು ಖಾನಾಪೂರು ತಾಲೂಕುಗಳ ಸೌಹಾರ್ದ ಸಹಕಾರಿ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ಬೆಳಗಾವಿಯಲ್ಲಿ ಮಂಗಳವಾರ ದಿನಾಂಕ: 16-04-2013ರಂದು ಕನ್ನಡ ಸಾಹಿತ್ಯ ಭವನದಲ್ಲಿ ಏರ್ಪಡಿಸಿದ ಕಾರ್ಯಗಾರದ ಉದ್ಘಾಟನೆ ಸಮಾರಂಭವನ್ನು ನೇರವೇರಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಬೆಳಗಾವಿ ಮತ್ತು ಖಾನಾಪೂರು ತಾಲೂಕುಗಳ ಎಲ್ಲ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಣಾದಿಕಾರಿಗಳು ಈ ಕಾರ್ಯಗಾರದ ಲಾಭವನ್ನು ಪಡೆದುಕೊಂಡರು.



# ವೃತ್ತಿ ನಿರತ ಮಹಿಳೆ ಆತ್ಮವಿಶ್ವಾಸದ ಗಣಿ

ಮೇ ೧೨ರಂದು ವಿಶ್ವ ತಾಯಂದಿರ ದಿನವನ್ನು ಆಚರಣೆ ಮಾಡಲಾಗುತ್ತಿದೆ. ಮಹಿಳೆ ಪೂರ್ಣ ಆತ್ಮವಿಶ್ವಾಸದೊಂದಿಗೆ ಕಾರ್ಯನಿರ್ವಹಿಸಿದಾಗ ಏನೆಲ್ಲವನ್ನು ಸಾಧನೆ ಮಾಡಬಹುದು ಎಂಬುವುದನ್ನು ಜ್ವಲಂತ ಉದಾಹರಣೆಗಳೊಂದಿಗೆ ವಿವರಿಸಿದ್ದಾರೆ.

▸▸ ಸವಿತ ಎನ್.ಇ.

ಮಾತನಾಡುವ ದೇವರು, ತಾಯಿಯೇ ಮೊದಲ ದೇವತೆ ಎಂಬೆಲ್ಲಾ ಮಾತಿದೆ ನನ್ನ ಪಾಲಿಗೆ ಇದೆಲ್ಲಾ ಸತ್ಯ. ತಾನು ಎಷ್ಟೇ ನೋವನ್ನುಂಡರೂ ಅದನ್ನು ಮರೆಮಾಚಿ ಸಂತಸದ ಅಮೃತಧಾರೆ ಎರೆದು ನಮ್ಮನೆಲ್ಲಾ ಬೆಳೆಸಿದ್ದಾರಲ್ಲಾ ಅದಕ್ಕೆ ಮೊದಲು ನಾವೆಲ್ಲ ಚಿರಋಣಿಯಾಗಿರಬೇಕು. ಆ ತಾಯಿಯೇ ಎಲ್ಲ ಕಡೆ ಜವಾಬ್ದಾರಿಗಳನ್ನು ನಿಭಾಯಿಸಲು ಅಸಾಧ್ಯ ಎಂದು ಹೆಂಡತಿ, ಅಕ್ಕ, ತಂಗಿ, ಹೀಗೆ ಅನೇಕ ರೂಪದಲ್ಲಿ ಕಾರ್ಯನಿರ್ವಹಿಸುವ ಮಹಿಳೆ.

ಬೆಳಗಾಗುತ್ತಿದ್ದಂತೆ ಏನೋ ಗಡಿಬಿಡಿ, ಅಡುಗೆ ಮನೆಯಲ್ಲಿ ತಿಂಡಿ, ಮಧ್ಯಾಹ್ನಕ್ಕೆ ಕ್ಯಾರಿಯರ್ ರೆಡಿ ಮಾಡಬೇಕು. ಮಗುವಿನ ಸ್ನಾನ, ತಿಂಡಿ ತಿನ್ನಿಸಬೇಕು, ಬ್ಯಾಗೊಂದರಲ್ಲಿ ಕಂದನಿಗೆ ಬೇಕಾಗುವ ಬಟ್ಟೆ, ಬಾಟಲ್‌ನಲ್ಲಿ ನೀರು, ಹಾಲು, ಊಟ ಎಲ್ಲವನ್ನೂ ಇಟ್ಟು ತಾನೂ ರೆಡಿಯಾಗಬೇಕು.

ಹೆಗಲಿಗೊಂದು ಬ್ಯಾಗ್ ಏರಿಸಿಕೊಂಡು, ಕಂದನನ್ನು ಕಂಕುಳಲ್ಲಿಟ್ಟು ಕೊಂಡು, ಡೇ ಕೇರ್‌ಗೆ ಹೊರಡುವ ಅವಳ ಅವಸರದ ಬೆಳಗುಗಳು ನಿತ್ಯ ಮುಗಿಯುವುದಿಲ್ಲ.... ಮತ್ತೆ ತನ್ನ ಕಛೇರಿಗೆ ಹೋಗುವ ಧಾವಂತ..... ಇದು ನಗರದಲ್ಲಿ ದುಡಿಯುವ ಎಲ್ಲ ತಾಯಂದಿರ ದಣಿವರಿಯದ ದಿನಚರಿ.

ಇಂದು ಹೆಣ್ಣು ನಾಲ್ಕು ಗೋಡೆಗಳ ಮಧ್ಯೆ ಕುಳಿತು ಬದುಕನ್ನು ಕಳೆಯುತ್ತಿಲ್ಲ. ಆಕೆ ತನ್ನದೇ ಸ್ವತಂತ್ರ ವ್ಯಕ್ತಿತ್ವ ರೂಪಿಸಿಕೊಳ್ಳಲು, ಸಾಮಾಜಿಕ ಜೀವನದಲ್ಲಿ ತನ್ನ ಛಾಪು ಮೂಡಿಸಲು ಮುಂದಾಗಿದ್ದಾಳೆ, ಹಾಗಾಗಿ ತನ್ನ ಕೆಲವು ಕರ್ತವ್ಯಗಳನ್ನು ನಿಭಾಯಿಸುವಾಗ ಅದಕ್ಕೆ ತಕ್ಕಂತೆ ವ್ಯವಸ್ಥೆಗಳನ್ನು ಮಾಡಿಕೊಂಡಿದ್ದಾಳೆ. ಹಿಂದೆ ದುಡಿಯುವ ಮಹಿಳೆಯರು ಕಡಿಮೆಯಿದ್ದರು ಗಂಡ ದುಡಿಯಲು ಹೋದರೆ, ಹೆಂಡತಿ ಮನೆಯಲ್ಲಿದ್ದು, ಮಕ್ಕಳ ಲಾಲನೆ–ಪಾಲನೆ, ಮನೆ ಕೆಲಸದಲ್ಲಿ ಸಮಯ ಕಳೆಯುತ್ತಿದ್ದಳು. ಹಾಗಾಗಿ ಮಕ್ಕಳ ಬಗ್ಗೆ ಅವಳಿಗೆ ಹೆಚ್ಚಿನ ಒಡನಾಟ ಇರುತ್ತಿತ್ತು. ಇಂದು ದುಡಿಯುವ ತಾಯಂದಿರೇ ಹೆಚ್ಚಾಗಿದ್ದು, ಹೊರ ಜಗತ್ತಿಗೆ ತೆರೆದುಕೊಂಡಿದ್ದಾರೆ. ಮನೆ ಮತ್ತು ಹೊರಗಿನ ಕೆಲಸಗಳ ಒತ್ತಡವಾದರೆ, ಮತ್ತೊಂದು ಕಡೆ ತಾಯ್ತನದ ತುಡಿತ ಆಕೆಯನ್ನು ಬಿಡುವುದಿಲ್ಲ. ಇವುಗಳ ನಡುವೆ ಸಿಲುಕಿದ್ದರೂ, ತಾಯಿಯಾಗಿ ತನ್ನ ಕರ್ತವ್ಯದ ಕಡೆ ಹೆಚ್ಚಿನ ಗಮನ ಕೊಡುತ್ತಾಳೆ. ಬೇಬಿ ಸಿಟ್ಟಿಂಗ್, ಡೇ ಕೇರ್ ಸೆಂಟರ್‌ನಲ್ಲಿ ತನಗಾಗಿ ಹಂಬಲಿಸುವ ಮಗುವನ್ನು ನೆನೆದು ಕಣ್ಣೊರೆಸಿಕೊಳ್ಳುತ್ತಾಳೆ, ಒಳಗೊಳಗೆ ತನಗೆ ಒದಗಿನ ಸಂಕಟವನ್ನು ನೆನೆದು ತನ್ನನ್ನೇ ತಾನು ಶಪಿಸಿಕೊಳ್ಳುತ್ತಾಳೆ. ಎಷ್ಟೇ ದುಡ್ಡು ಸುರಿದರೂ ತನ್ನಂತೆ ಮಗುವನ್ನು ಕಾಪಾಡುವ ಪರ್ಯಾಯ ತಾಯಿ ಸಿಗದೆ ಪರಿತಪಿಸುತ್ತಾಳೆ, ಇನ್ನು ಕೆಲವರು ಅದೃಷ್ಟವಂತರೂ ಇರುತ್ತಾರೆ. ಅವರ ಮಕ್ಕಳಿಗೆ ಅಜ್ಜಿ–ತಾತ ಸಿಗುತ್ತಾರೆ. ತಾಯಿಯಷ್ಟೇ ಪರಿಶುದ್ಧ ಪ್ರೀತಿ ತೋರುವ ಇತರ ಸಂಬಂಧಿಗಳೂ ಇರುತ್ತಾರೆ. ಅವರ ಬೆಚ್ಚಗಿನ ಪ್ರೀತಿಯಲ್ಲಿ ಮಗು ಆರೋಗ್ಯಕರವಾಗಿ ಬೆಳೆಯುತ್ತದೆ.

ದುಡಿಯುವ ಮಹಿಳೆ ಬೇರೆ ಮಹಿಳೆಯರಿಗಿಂತ ಹೆಚ್ಚು ಆತ್ಮವಿಶ್ವಾಸ ಹಾಗೂ ಸ್ವತಂತ್ರ ಪ್ರವೃತ್ತಿ ಹೊಂದಿರುತ್ತಾಳೆ, ಆಕೆಗೆ ಮನೆ ನಿಭಾಯಿಸುವ, ಮಕ್ಕಳನ್ನು ನೋಡಿಕೊಳ್ಳುವ ಸಾಮರ್ಥ್ಯ ಹೆಚ್ಚಾಗಿರುತ್ತದೆ ಎಂದು ಸಂಶೋಧನೆಗಳು ಹೇಳಿವೆ. ಇದಕ್ಕೆ ಆಕೆ ಮಾಡಿರುವ ವಿದ್ಯಾಭ್ಯಾಸ ಮತ್ತು ಆಲೋಚನೆಗಳೂ ಕಾರಣ, ಹಾಗಿದ್ದ ಮೇಲೆ ದುಡಿಯುವ ತಾಯಿ ತನ್ನ ಮಗುವಿನ ಸಂಬಂಧವನ್ನು ಬೆಳೆಸಿಕೊಳ್ಳಬೇಕು. ಆಗ ತನ್ನ ಮಗುವಿಗೆ ಸಮಯ ನೀಡಲಾಗುತ್ತಿಲ್ಲವಲ್ಲ ಎಂಬ ಕೊರಗು ತಪ್ಪಿಸಿಕೊಳ್ಳಬಹುದು.

ಆರ್ಥಿಕ ಸ್ವತಂತ್ರ ಸ್ತ್ರೀ ಜಗತ್ತಿನ ಇಂದಿನ ಕನಸು. ವೃತ್ತಿ ನಿರತ ಮಹಿಳೆ ಆತ್ಮವಿಶ್ವಾಸದ ಗಣಿ, ತನ್ನಿಷ್ಟದಂತೆ ಬದುಕುವ ರಾಣಿ. ನಿಜ ಜಗದ ಕಣ್ಣಿಗೆ ಅವಳು ಸಂತೃಪ್ತೆ, ಪರಿಪೂರ್ಣೆ, ಆದರೆ ಅವಳ ತಲ್ಲಣಗಳು ಅವಳ ಅಂತರಾಳಕ್ಕಷ್ಟೆ ಗೊತ್ತು.

ಜೈವಿಕ ಲಕ್ಷಣಗಳಿಂದ ಪಡೆದ ತಾಯ್ತನ ಅವಳು ಮಾತ್ರ ನಿಭಾಯಿಸಬಲ್ಲ ಕರ್ತವ್ಯ. ಹೊರುವ ಮತ್ತು ಎಳೆ ಮಗುವನ್ನು ಸಾಕುವ ಅವಳ ಹಕ್ಕಿಗೆ ದುಡಿಮೆ ಬಹು ದೊಡ್ಡ ಧಕ್ಕೆ. ಅಂತಹ ಮಹಿಳೆಗೆ ದುಡಿಮೆಯ ನಿಯಮಗಳು ಸಡಿಲವಾಗಿದ್ದರೂ ಮಗುವಿನ ಆರೈಕೆಗೆ ಸಂಪೂರ್ಣ ತೊಡಗಿಸಿಕೊಳ್ಳಲಾರದ ಅಪರಿಪೂರ್ಣತೆ, ಅನ್ಯರನ್ನು ಅವಲಂಬಿಸಬೇಕಾದ ಅಸಹಾಯಕತೆ ಅವಳನ್ನು ಕಾಡುತ್ತಲೇ ಇರುತ್ತದೆ. ವೃತ್ತಿ ಮತ್ತು ತಾಯ್ತನ ಎರಡರಲ್ಲೂ ಆಕೆಗೆ ಅತೃಪ್ತಿ. ಮಹಿಳೆ ಉದ್ಯೋಗಕ್ಕಾಗಿ ವಿವಾಹವನ್ನಾಗಲೀ, ಸಂಸಾರವನ್ನಾಗಲೀ ಕೈಬಿಡಬೇಕಿಲ್ಲ. ಸಂಸಾರದೊಂದಿಗೆ ಉನ್ನತವಾದುದನ್ನು ಸಾಧಿಸಿದ ಸಾವಿರಾರು ಮಹಿಳೆಯರ ಚಿತ್ರಣ ನಮ್ಮ ಮುಂದಿದೆ. ಅಂತಹವರ ಜೀವನ ದುಡಿಯುವ ಮಹಿಳೆಗೆ ಸ್ಫೂರ್ತಿಯಾಗಬೇಕು. ತನ್ನೊಳಗಿನ ಶಕ್ತಿ–ಸಾಮರ್ಥ್ಯವನ್ನು ಅರಿಯಬೇಕು. ಕೌಟುಂಬಿಕ ಹೊಣೆಗಾರಿಕೆಯೊಂದಿಗೇ ವೃತ್ತಿ ಜೀವನದಲ್ಲಿ ಎತ್ತರಕ್ಕೇರಬೇಕು.

ಉದ್ಯೋಗಸ್ಥ ಮಹಿಳೆಯ ಮತ್ತೊಂದು ಗಂಭೀರ ಸವಾಲು ಪುರುಷ ಸಹೋದ್ಯೋಗಿಗಳದು. ಎಂತಹ ಉನ್ನತ ಹುದ್ದೆಯಲ್ಲಿದ್ದರೂ ಕಿರುಕುಳ ಕೊಡುವ ಪುರುಷ ವರ್ಗ ಅವಳ ಸುತ್ತ ಇದ್ದೇ ಇದೆ. ವೃತ್ತಿಪರ ಮಹಿಳೆಯ ಶೀಲ, ನಡತೆಯ ಬಗ್ಗೆ ಸಾಂಪ್ರದಾಯಿಕ ಕಣ್ಣುಗಳಿಗೆ ಸದಾ ಸಂಶಯ. ಆದ್ದರಿಂದ ತನ್ನ ಬುದ್ಧಿ, ಭಾವ, ಮಾತು, ವರ್ತನೆ ಎಲ್ಲದರಲ್ಲೂ ಹಿತ–ಮಿತ ಕಾಪಾಡಿಕೊಂಡು ಪುರುಷ ಸಹೋದ್ಯೋಗಿಗಳ ಗೌರವ ಗಳಿಸಬೇಕಾದ ಬಹುದೊಡ್ಡ ಜವಾಬ್ದಾರಿ ಮಹಿಳೆಯದು. ವೃತ್ತಿಯಲ್ಲಿ ಅಂತರ ಕಾಯ್ದುಕೊಳ್ಳುವ ಅವಕಾಶ ಇದ್ದಾಗ ಆಕೆ ಗೊಂದಲ ಮುಕ್ತಳು. ಗುಂಪುಕಾರ್ಯ ಅನಿವಾರ್ಯವಾದಾಗ ಅಸಹಾಯಕಳು. ನಿರಂತರ ವರದಿಯಾಗುತ್ತಿರುವ ಅತ್ಯಾಚಾರ ಪ್ರಕರಣಗಳನ್ನು ಅವಲೋಕಿಸಿದಾಗ ಅವಳ ಆತಂಕ ಅರ್ಥವಾಗುತ್ತದೆ. ಆದ್ದರಿಂದ ಭಯದ ವಾತಾವರಣದಲ್ಲೇ ದಿನಗಳೆಯಬೇಕಾದ ಸಂದಿಗ್ಧತೆ, ಯಾರೊಂದಿಗೂ ಮಾತಿಗೆ ಸಿಲುಕದೇ, ಸಲಿಗೆಗೆ ಆಸ್ಪದ ಕೊಡದೆ ಸನ್ನಿವೇಶವನ್ನು ಹೊಂದಿಸಿಕೊಳ್ಳಬೇಕಾದ ಚಾಕಚಕ್ಯತೆ ಮಹಿಳೆಗೆ ಅಗತ್ಯವಾಗಿದೆ.

(ಮುಂದಿನ ಸಂಚಿಕೆಗೆ)

# ಪ್ರಾದೇಶಿಕ ಸಹಕಾರಿ ಆಡಳಿತ ನಿರ್ವಹಣಾ ಸಂಸ್ಥೆ – ವೆಬ್‌ತಾಣ ಪರಿಚಯ

http://ricmbangalore.org/

■ ರಘುನಂದನ ಕೆ.
ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ಮನುಷ್ಯನ ಜೀವಿತಾವಧಿಯಲ್ಲಿ ಕಲಿಕೆಯೆನ್ನುವುದು ನಿರಂತರ ಪ್ರಕ್ರಿಯೆ. ಶಿಕ್ಷಣದ ನಂತರದಲ್ಲಿ ಮನುಷ್ಯ ವೃತ್ತಿಯ ಕೆಲಸಗಳಿಂದ, ಆಸಕ್ತಿಯಿಂದ, ಓದು, ಪ್ರವಾಸ ಇತ್ಯಾದಿಗಳ ಮೂಲಕ ಕಲಿಕೆಯನ್ನು ಮುಂದುವರೆಸುತ್ತ ಹೋಗುತ್ತಾನೆ. ವೃತ್ತಿ ಜೀವನದ ಯಶಸ್ಸಿಗಾಗಿ ವೃತ್ತಿ ಕೌಶಲ್ಯವನ್ನು ಹೆಚ್ಚಿಸಿಕೊಳ್ಳುವುದು ಅತ್ಯಂತ ವೇಗವಾಗಿ ಬದಲಾಗುತ್ತಿರುವ ಇಂದಿನ ದಿನಗಳಲ್ಲಿ ಅನಿವಾರ್ಯವೂ ಹೌದು. ಸಹಕಾರ ಕ್ಷೇತ್ರ ಕೂಡ ಆಧುನಿಕತೆಯ ಹಾಗೂ ತಂತ್ರಜ್ಞಾನದ ಬಳಕೆಯೆಡೆಗೆ ಮುಖ ಮಾಡುತ್ತಿರುವ ಪ್ರಸಕ್ತ ಸನ್ನಿವೇಶದಲ್ಲಿ ಸಹಕಾರ ವಿಷಯವಾಗಿ ಹಾಗೂ ಸಹಕಾರ ಕ್ಷೇತ್ರದಲ್ಲಿ ವೃತ್ತಿಪರತೆಯನ್ನು ತರುವ ನಿಟ್ಟಿನಲ್ಲಿ ಪ್ರಾರಂಭಿಸಲ್ಪಟ್ಟ, ಬೆಂಗಳೂರಿನ ಪದ್ಮನಾಭ ನಗರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ – ಪ್ರಾದೇಶಿಕ ಸಹಕಾರಿ ಆಡಳಿತ ನಿರ್ವಹಣಾ ಸಂಸ್ಥೆ.

ಭಾರತ ಸರ್ಕಾರದ ಕೃಷಿ ಮತ್ತು ಸಹಕಾರ ಸಚಿವಾಲಯದಡಿಯಲ್ಲಿ ಸ್ಥಾಪಿಸಲ್ಪಟ್ಟ ಈ ಸಂಸ್ಥೆ ಆಡಳಿತ ನಿರ್ವಹಣೆಯಲ್ಲಿ ಮತ್ತು ಮಾಹಿತಿ ತಂತ್ರಜ್ಞಾನದಲ್ಲಿ ಶಿಕ್ಷಣ ಹಾಗೂ ತರಬೇತಿಗಳನ್ನು ನೀಡುವುದರ ಮೂಲಕ ಭಾರತದ ಆರ್ಥಿಕತೆಯನ್ನು ಹಾಗೂ ಸಹಕಾರ ಕ್ಷೇತ್ರವನ್ನು ಪ್ರಭಾವಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ನೂತನ ಮ್ಯಾನೆಜ್ಮೆಂಟ್ ಶಿಕ್ಷಣ ಹಾಗೂ ತರಬೇತಿಯ ಮೂಲಕ ಬದ್ಧತೆಯುಳ್ಳ ಯುವ ವೃತ್ತಿಪರರನ್ನು ತಯಾರು ಮಾಡುವುದು ಈ ಸಂಸ್ಥೆಯ ಧ್ಯೇಯ. ಸಹಕಾರ ಕ್ಷೇತ್ರದಲ್ಲಿ ತರಬೇತಿ ಹಾಗೂ ಶಿಕ್ಷಣವನ್ನು ನೀಡುವುದರ ಮೂಲಕ ವೃತ್ತಿಪರತೆಯನ್ನು ತರಲು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯಾದ "ಪ್ರಾದೇಶಿಕ ಸಹಕಾರಿ ಆಡಳಿತ ನಿರ್ವಹಣಾ ಸಂಸ್ಥೆ" (ರೀಜಿನಲ್ ಇನಸ್ಟಿಟ್ಯೂಟ್ ಆಫ್ ಕೋ ಆಪರೇಟೀವ್ ಮ್ಯಾನೆಜ್ಮೆಂಟ್) ಇದರ ವೆಬ್‌ತಾಣದ ಪರಿಚಯ ಇಲ್ಲಿದೆ.

**ವೆಬ್‌ತಾಣ 11 : http://ricmbangalore.org/**

- "ಪ್ರಾದೇಶಿಕ ಸಹಕಾರಿ ಆಡಳಿತ ನಿರ್ವಹಣಾ ಸಂಸ್ಥೆ" ಇದರ ಧ್ಯೇಯ ಉದ್ದೇಶಗಳು, ಸಂಸ್ಥೆಯ ಮುಖ್ಯಾಂಶಗಳು, ಕಾಲೇಜು ಆವರಣ, ಕಟ್ಟಡಗಳ ಸಂಕೀರ್ಣ ಇವುಗಳ ಬಗ್ಗೆ ಮಾಹಿತಿಯನ್ನು ಈ ವೆಬ್‌ತಾಣದಲ್ಲಿ ನೋಡಬಹುದು.
- ಸಂಸ್ಥೆಯ ಆಡಳಿತ ನಿರ್ವಹಣಾ ಸಮಿತಿ, ಕಾರ್ಯನಿರ್ವಹಿಸುತ್ತಿರುವ ಬೋಧಕರ ಮಾಹಿತಿ, ಶೈಕ್ಷಣಿಕ ಆವರಣದಲ್ಲಿನ ಸೌಲಭ್ಯಗಳು, ಪಡೆದ ಪ್ರಶಸ್ತಿಯ ಮಾಹಿತಿಯನ್ನು ಈ ತಾಣದಲ್ಲಿ ನೋಡಬಹುದು.
- ಈ ಸಂಸ್ಥೆಯಲ್ಲಿನ ಶೈಕ್ಷಣಿಕ ಪದವಿ/ಡಿಪ್ಲೋಮಾದ ವಿವರ, ಸಹಕಾರ ಆಡಳಿತ ನಿರ್ವಹಣೆಯಲ್ಲಿನ, ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸಂಬಂಧಿಸಿದ, ಸಹಕಾರ ಮಾರುಕಟ್ಟೆ ನಿರ್ವಹಣೆಗೆ ಸಂಬಂಧಿಸಿದಂತೆ ಇರಬಹುದಾದ ದೀರ್ಘಾವಧಿಯ ತರಬೇತಿ ಕಾರ್ಯಕ್ರಮಗಳ ಮಾಹಿತಿ, ಇದಲ್ಲದೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗುವ ಮಹಿಳಾ ಸಹಕಾರ, ಡೈರಿ ಕ್ಷೇತ್ರ, ಸಹಕಾರ ಕ್ಷೇತ್ರದಲ್ಲಿನ ಕಾರ್ಮಿಕರ ಹಾಗೂ ನೌಕರರ ಸಂಸ್ಥೆಗಳು ಇತ್ಯಾದಿ ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳ ಪಟ್ಟಿ, ಈ ತರಬೇತಿ ಅಥವಾ ಪದವಿಯಲ್ಲಿ ಪಾಲ್ಗೊಳ್ಳುವ ಅರ್ಹತೆಯ ವಿವರಗಳನ್ನು ಈ ತಾಣದಲ್ಲಿ ನೋಡಬಹುದು.



- ವಸತಿಯೊಂದಿಗಿನ ಪೂರ್ಣಪ್ರಮಾಣದ ಸ್ನಾತಕೋತ್ತರ ಪದವಿ ಹಾಗೂ ಪದವಿಯ ಮಾಹಿತಿಯನ್ನು ಹಾಗೂ ಸಂಬಂಧಿಸಿದ ಅರ್ಜಿಯನ್ನೂ, ಪರೀಕ್ಷಾ ವಿವರಗಳನ್ನು ಈ ತಾಣದಲ್ಲಿ ನೋಡಬಹುದು.
- ಸಂಶೋಧನೆ ಮತ್ತು ಸಲಹಾ ಯೋಜನೆಗಳನ್ನು ಹಾಗೂ 2001 ರಿಂದ 2011ರವರೆಗಿನ ವಿವಿಧ ತರಬೇತಿಗಳ ಸಾಧನೆಯ ಪಟ್ಟಿಯನ್ನು ಅಂಕಿ ಅಂಶಗಳೊಂದಿಗೆ ಈ ವೆಬ್ ತಾಣದಲ್ಲಿ ನೋಡಬಹುದು.

ಸಹಕಾರ ಕ್ಷೇತ್ರದಲ್ಲಿ ಶೈಕ್ಷಣಿಕ ಸಹಕಾರ ಸಂಸ್ಥೆಗಳಿವೆ. ಇವು ವಿವಿಧ ವಿಶ್ವವಿದ್ಯಾಲಯಗಳಿಂದ ಮಾನ್ಯತೆ ಪಡೆದು ಶಾಲಾ ಕಾಲೇಜುಗಳನ್ನು ನಡೆಸುತ್ತಿವೆ. ಆದರೆ, ಅತ್ಯಂತ ವಿಸ್ತಾರವಾದ ಭಾರತದ ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ವೃತ್ತಿಪರತೆಯೆಡೆಗೆ ತರಬೇತುಗೊಳಿಸುವ ಸಂಸ್ಥೆಗಳು ಅತ್ಯಂತ ಕಡಿಮೆ. ಸಹಕಾರ ಸಂಸ್ಥೆಗಳ ಅಭಿವೃದ್ಧಿ ಹಾಗೂ ದೇಶದ ಆರ್ಥಿಕತೆಯೆಡೆಗೆ ಸಹಕಾರ ಕ್ಷೇತ್ರದ ಕೊಡುಗೆ ಅದರಲ್ಲಿನ ನೌಕರರನ್ನು ಅವಲಂಬಿಸಿರುತ್ತದೆ. ಸಹಕಾರ ಕ್ಷೇತ್ರದಲ್ಲಿ ನೌಕರರಿಗೆ ಪ್ರಾಧಾನ್ಯತೆ ಕಡಿಮೆ, ವೃತ್ತಿಪರರ ಸಂಖ್ಯೆ ಕಡಿಮೆ ಎನ್ನುವ ಕೂಗುಗಳಿಂದ ಸಹಕಾರ ಕ್ಷೇತ್ರ ಹೊರಬರಬೇಕಿದೆ. ದೇಶದ ಮೂಲೆ ಮೂಲೆಗಳಲ್ಲೂ ವ್ಯಾಪಿಸಿರುವ ಸಹಕಾರ ಕ್ಷೇತ್ರ ನಗರ ಕೇಂದ್ರಿತ ಉದ್ಯಮಗಳನ್ನು ಮೀರಿ ಅಥವಾ ಸಮಾನಾಂತರವಾಗಿ ಬೆಳೆಯುವ ದಿನಗಳು ಬರಬೇಕಿದೆ. ಅದಕ್ಕಾಗಿ ಸಹಕಾರ ಕ್ಷೇತ್ರದಿಂದಲೇ ಸಹಕಾರ ಸಂಸ್ಥೆಗಳನ್ನು ವೃತ್ತಿಪರತೆಯೆಡೆಗೆ ಬೆಳೆಸುವ ನಿಟ್ಟಿನಲ್ಲಿ ಶಿಕ್ಷಣ ಹಾಗೂ ತರಬೇತಿಯನ್ನು ನೀಡುವ ಸಂಸ್ಥೆಗಳು ಹುಟ್ಟಬೇಕಿದೆ. ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲವೇ ಸಂಸ್ಥೆಗಳಲ್ಲಿ "ಪ್ರಾದೇಶಿಕ ಸಹಕಾರಿ ಆಡಳಿತ ನಿರ್ವಹಣಾ ಸಂಸ್ಥೆ"ಯ ಕಾರ್ಯ ಗುರುತರವಾದದ್ದು. ಈ ಸಂಸ್ಥೆಯ ಮಾಹಿತಿ ಇಂತಹ ಸಂಸ್ಥೆಗಳನ್ನು ಕಟ್ಟುವಲ್ಲಿ ಹಾಗೂ ನೌಕರರಿಗೆ ವೃತ್ತಿಪರತೆಯನ್ನು ಬದ್ಧತೆಯನ್ನು ರೂಢಿ ಮಾಡಿಸುವ ತರಬೇತಿಯನ್ನು ಒದಗಿಸುವ ನಿಟ್ಟಿನಲ್ಲಿ ಸಹಕಾರಿಗಳ ಗಮನಸೆಳೆಯಲಿ ಎನ್ನುವ ಆಶಯ ನಮ್ಮದು. ■

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

'ನಿರ್ಮಾಣ ಭವನ', ಡಾ. ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010

Ph: 080-23378375-80, ಇ-mail: souharda@souharda.coop

ಸಂಖ್ಯೆ: ಕರಾಸೌಸಂಸನಿ/ ಸುತ್ತೋಲೆ/ಆ-2/2013-14 ದಿನಾಂಕ:25.04.2013

**ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ**

**ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ**

**ವಿಷಯ: ಶಾಖೆ ಆರಂಭಿಸಲು ಅನುಮತಿ ನೀಡುವ ಮಾನದಂಡಗಳ ಕುರಿತು.**

ಕರ್ನಾಟಕ ಸೌಹಾರ್ದ ಸಹಕಾರ ಕಾಯ್ದೆಗೆ ತಿದ್ದುಪಡಿಯಾಗಿದ್ದು, ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ, 2012ರ ಕಲಂ 23(ಎ) ರಂತೆ ಯಾವುದೇ ಸಹಕಾರಿಯು ಶಾಖೆಗಳನ್ನು, ಉಪ ಶಾಖೆಗಳನ್ನು, ಪಾವತಿ ಕಛೇರಿಗಳನ್ನು ಅಥವಾ ಯಾವುದೇ ಹೆಸರಿನಿಂದ ಕರೆಯಲ್ಪಡುವ ಕಛೇರಿಗಳನ್ನು ಸಂಯುಕ್ತ ಸಹಕಾರಿಯ ಮತ್ತು ತನ್ನ ಸಾಮಾನ್ಯ ಸಭೆಯ ಪೂರ್ವ ಅನುಮತಿಯೊಡನೆ ಆರಂಭಿಸಬಹುದು. ದಿನಾಂಕ 11 ಫೆಬ್ರವರಿ 2013 ರಿಂದ ತಿದ್ದುಪಡಿ ಅಧಿನಿಯಮವು ಜಾರಿಗೆ ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿಗಳ ಶಾಖೆ/ ಉಪ ಶಾಖೆ/ ಸೇವಾ ಕೇಂದ್ರ/ ಪಾವತಿ ಕೇಂದ್ರ/ ಯಾವುದೇ ಹೆಸರಿನಲ್ಲಿ ಕರೆಯಲ್ಪಡುವ ಕಛೇರಿಗಳ ಮಾಹಿತಿಗಳನ್ನು ಒದಗಿಸಲು ದಿನಾಂಕ 01 ಮಾರ್ಚ 2013ರ ಸುತ್ತೋಲೆ ಮೂಲಕ ಸೂಚಿಸಲಾಗಿತ್ತು. ಅನೇಕ ಸಹಕಾರಿಗಳು ಮಾಹಿತಿ ಸಲ್ಲಿಸಿವೆ. ಕೆಲವು ಸಹಕಾರಿಗಳು ಮಾಹಿತಿ ಸಲ್ಲಿಸುವುದು ಬಾಕಿ ಇದೆ.

ದಿನಾಂಕ 20 ಏಪ್ರಿಲ್ 2013ರಂದು ನಡೆದ ಆಡಳಿತ ಮಂಡಲಿ ಸಭೆಯು ಸಹಕಾರಿಗಳಿಗೆ ಶಾಖೆ ತೆರೆಯುವ ಸಂದರ್ಭದಲ್ಲಿ ಅನುಮತಿ ನೀಡಲು ಅನುಸರಿಸಬೇಕಾದ ಮಾನದಂಡಗಳ ಕುರಿತು ಚರ್ಚಿಸಿ ಕರಡು ಮಾನದಂಡಗಳನ್ನು ಮತ್ತು ಸಲ್ಲಿಸಬೇಕಾದ ದಾಖಲೆಗಳ ಪಟ್ಟಿಯನ್ನು ರಚಿಸಿತು. ಕರಡು ಮಾನದಂಡಗಳ ಕುರಿತು ಸಹಕಾರಿಗಳ ಅಭಿಪ್ರಾಯ ಪಡೆದು ಮುಂದಿನ ಆಡಳಿತ ಮಂಡಲಿ ಸಭೆಯಲ್ಲಿ ಅದನ್ನು ಅಂತಿಮಗೊಳಿಸಲು ನಿರ್ಣಯಿಸಿತು. ಅಲ್ಲದೇ ಈಗಾಗಲೇ ಸಹಕಾರಿಗಳು ಆರಂಭಿಸಿರುವ ಶಾಖೆಗಳ ಕುರಿತಂತೆ, ಶಾಖೆಗಳಿಗೆ ಅನುಮತಿ ಪತ್ರ ನೀಡಲು ಕೂಡ ಸಭೆಯು ನಿರ್ಣಯಿಸಿತು.

ಮಂಡಲಿಯು ಅನುಮೋದಿಸಿದ ಕರಡು ಮಾನದಂಡಗಳು ಈ ಕೆಳಕಂಡಂತೆ ಇವೆ. ಇವುಗಳ ಕುರಿತು ತಮ್ಮ ಸಹಕಾರಿಯ ಆಕ್ಷೇಪಣೆ/ ಸಲಹೆ ಏನಾದರೂ ಇದ್ದಲ್ಲಿ ದಿನಾಂಕ 20 ಮೇ 2013ರೊಳಗೆ ಸಂಯುಕ್ತ ಸಹಕಾರಿಯನ್ನು ತಲುಪುವಂತೆ ಲಿಖಿತವಾಗಿ ಕಳುಹಿಸಲು ಅಥವಾ ಇಮೇಲ್ ಕಳುಹಿಸಲು ಈ ಮೂಲಕ ಸೂಚಿಸಿದೆ.=

**ಶಾಖೆ ತೆರೆಯಲು ಅನುಮತಿ ನೀಡಲು ಮಾನದಂಡಗಳು :**

- ಹಿಂದಿನ ಸತತ ಎರಡು ವರ್ಷ ಲಾಭದಲ್ಲಿರಬೇಕು.
- ಶಾಖೆ ಆರಂಭಿಸಲು ಅನುಮತಿ ಕೋರಿಕೆ ಜೊತೆಯಲ್ಲಿ ಸಲ್ಲಿಸಬೇಕಾದ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿರಬೇಕು.
- ಈಗಾಗಲೇ ಶಾಖೆಗಳಿದ್ದಲ್ಲಿ ಶೇ.20ಕ್ಕಿಂತ ಹೆಚ್ಚು ಶಾಖೆಗಳು ನಷ್ಟದಲ್ಲಿರಬಾರದು.
- ಓವರ್ ಡ್ಯೂ ಪ್ರಮಾಣವೂ ಸಾಲ ಮತ್ತು ಮುಂಗಡಗಳ ಶೇ.15ನ್ನು ಮೀರಿರಬಾರದು ಮತ್ತು ಸ್ವಂತ ಬಂಡವಾಳದ ಶೇ.50ನ್ನು ಮೀರಿರಬಾರದು.
- ಪ್ರಸ್ತುತ ಇರುವ ಲಾಭವು ಪ್ರಸ್ತಾವಿತ ಶಾಖೆಯ ವೆಚ್ಚವನ್ನು ಭರಿಸಲು ಶಕ್ತವಾಗಿರಬೇಕು.
- ಯಾವುದೇ ವಿಚಾರಣೆ ಬಾಕಿ ಇರಬಾರದು.
- ಶಾಸನಬದ್ಧ ಕರ್ತವ್ಯಗಳನ್ನು ನಿಗದಿತ ಸಮಯದಲ್ಲಿ ಪೂರೈಸಿರಬೇಕು (ಲೆಕ್ಕಪರಿಶೋಧನೆ, ಸಾಮಾನ್ಯ ಸಭೆ, ಚುನಾವಣೆ, ನಿಬಂಧಕರಿಗೆ/ ಸಂಯುಕ್ತ ಸಹಕಾರಿಗೆ ವರದಿ ಸಲ್ಲಿಸುವುದು, ಸಂಯುಕ್ತ ಸಹಕಾರಿಗೆ ವಾರ್ಷಿಕ ಶುಲ್ಕ/ ಶಿಕ್ಷಣ ನಿಧಿ ಸಲ್ಲಿಕೆ ಇತ್ಯಾದಿ)
- ಪ್ರತಿ ಶಾಖೆಗೆ ಇರಬೇಕಾದ ಸ್ವಂತ ಬಂಡವಾಳ (ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರೂ.30 ಲಕ್ಷ, ಜಿಲ್ಲಾ ಕೇಂದ್ರಗಳಿಗೆ ರೂ. 20 ಲಕ್ಷ, ಇತರೆ ಕೇಂದ್ರಗಳಿಗೆ ರೂ. 10 ಲಕ್ಷ)

**ಶಾಖೆ ತೆರೆಯಲು ಅನುಮತಿ ಕೋರುವ ಪತ್ರದ ಜೊತೆ ಸಲ್ಲಿಸಬೇಕಾದ ಮಾಹಿತಿ/ ದಾಖಲೆಗಳೂ :**

- ಶಾಖೆ ತೆರೆಯಲು ಉದ್ದೇಶಿಸಿರುವ ಸ್ಥಳದ ವಿವರ.
- ಸಹಕಾರಿಯ ಒಟ್ಟು ಸದಸ್ಯರ ಸಂಖ್ಯೆ ಮತ್ತು ನೂತನ ಶಾಖೆ ಆರಂಭಿಸುವ ಸ್ಥಳದ ಸುತ್ತಲೂ ಇರುವ ಸದಸ್ಯರ ಸಂಖ್ಯೆ.

- ಸಹಕಾರಿ ಹಿಂದಿನ ಎರಡು ವರ್ಷಗಳ ಲೆಕ್ಕಪರಿಶೋಧಿತ ಆಸ್ತಿ–ಜವಾಬ್ದಾರಿ ತಃಖ್ತೆ, ಲಾಭ–ಹಾನಿ ತಃಖ್ತೆ ಮತ್ತು ಜಮಾ–ಖರ್ಚು ತಃಖ್ತೆ (ಶೆಡ್ಯೂಲುಗಳ ಸಹಿತ).
- ಹಿಂದಿನ ಎರಡು ವರ್ಷಗಳಲ್ಲಿ ಸದಸ್ಯರಿಗೆ ಹಂಚಿಕೆ ಮಾಡಿರುವ ಲಾಭಾಂಶ.
- ಹಿಂದಿನ ಎರಡು ವರ್ಷಗಳ ಓವರ್‌ಡ್ಯೂ ಪ್ರಮಾಣ.
- ಸ್ವಂತ ಬಂಡವಾಳ (ಪಾವತಿಯಾದ ಶೇರು ಬಂಡವಾಳ + ಎಲ್ಲಾ ರೀತಿಯ ಮೀಸಲು ನಿಧಿಗಳು – ಕೂಡಿಬಿದ್ದ ನಷ್ಟಗಳು).
- ಯಾವುದೇ ರೀತಿಯ ವಿಚಾರಣೆ ನಡೆಯುತ್ತಿದೆಯೇ? ಇದ್ದಲ್ಲಿ ವಿವರ.
- ಈಗಿರುವ ಒಟ್ಟು ಶಾಖೆಗಳ ವಿವರ (ಪ್ರತಿ ಶಾಖೆಯ ವಿಳಾಸ, ಆರಂಭಿಸಿದ ದಿನಾಂಕ, ಹಿಂದಿನ ಎರಡು ವರ್ಷಗಳ ಲಾಭ/ ನಷ್ಟ, ಒಟ್ಟು ಸಿಬ್ಬಂದಿಗಳ ಸಂಖ್ಯೆ ಇತ್ಯಾದಿ ವಿವರಗಳು).
- ಪ್ರಸ್ತಾವಿತ ಶಾಖೆಯನ್ನು ಆರಂಭಿಸಲು ಆಗಬಹುದಾದ ಬಂಡವಾಳ ವೆಚ್ಚ (ಕಛೇರಿ ಠೇವಣಿ, ಪೀಠೋಪಕರಣಗಳು, ಯಂತ್ರೋಪಕರಣಗಳು ಇತ್ಯಾದಿ).
- ಪ್ರಸ್ತಾವಿತ ಶಾಖೆಯ ಮುಂದಿನ ಎರಡು ವರ್ಷಗಳ ಅಂದಾಜು ಖರ್ಚು–ವೆಚ್ಚಗಳು (ಸಿಬ್ಬಂದಿ ವೆಚ್ಚ, ಬಾಡಿಗೆ, ವಿದ್ಯುತ್, ದೂರವಾಣಿ, ಸ್ಟೇಶನರಿ ಇತ್ಯಾದಿ).
- ಪ್ರಸ್ತಾವಿತ ಶಾಖೆಯ ಮುಂದಿನ ಎರಡು ವರ್ಷದ ಅಂದಾಜು ವ್ಯವಹಾರ.
- ಪ್ರಸ್ತಾವಿತ ಶಾಖೆಯ ಸ್ಥಾನದಿಂದ ಈಗಿರುವ ಹತ್ತಿರದ ಶಾಖೆಗೆ ಇರುವ ದೂರ.
- ಸಹಕಾರಿಯ ಶಾಖೆ ಆರಂಭಿಸಿದಲ್ಲಿ ಯಶಸ್ವಿಯಾಗುವ ಕುರಿತು ಸೌಹಾರ್ದ ನಿಯಮಗಳಲ್ಲಿ ಹೇಳಿದ ರೀತಿಯಲ್ಲಿ ಕಾರ್ಯಸಾಧ್ಯತಾ ವರದಿ.

ಕರ್ನಾಟಕ ಸರ್ಕಾರ
(ಸಹಕಾರ ಇಲಾಖೆ)

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–52**

ಸಂಖ್ಯೆ:ಆರ್‌ಎಸ್‌ಆರ್/164/ಎಕ್ಸ್‌ಎಂಸಿ/2012–13 ದಿನಾಂಕ–19–4–2013

ವಿಷಯ;–ರಾಜ್ಯದಲ್ಲಿರುವ ಸೌಹಾರ್ದ ಸಹಕಾರಿಗಳ ವಿಶೇಷ ಸರ್ವ ಸದಸ್ಯರ ಸಭೆ ಕರೆಯಲು ಆದೇಶಿಸಿರುವ ಬಗ್ಗೆ.

ಉಲ್ಲೇಖ;–ಈ ಕಛೇರಿಯ ಸಮಸಂಖ್ಯೆ ಆದೇಶ ದಿನಾಂಕ;26–2–2013.

********

ಕರ್ನಾಟಕ ಸೌಹಾರ್ದ ಸಹಕಾರಿಗಳ ಅಧಿನಿಯಮ 1997 ಕ್ಕೆ ತಿದ್ದುಪಡಿ ತಂದು, ದಿನಾಂಕ;11–2–2013 ರಿಂದ ಜಾರಿಗೆ ತಂದಿರುವ ಹಿನ್ನೆಲೆಯಲ್ಲಿ, ಆ ದಿನಾಂಕದಿಂದ 90 ದಿನಗಳೊಳಗೆ ಮೂರು ಕಾರ್ಯಸೂಚಿಗಳ ಬಗ್ಗೆ ನಿರ್ಣಯ ಕೈಗೊಳ್ಳಲು ವಿಶೇಷ ಸರ್ವಸದಸ್ಯರ ಸಭೆ ಕರೆಯಲು, ಉಲ್ಲೇಖಿತ ಆದೇಶದಲ್ಲಿ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಸೂಚನೆ ನೀಡಲಾಗಿತ್ತು.

ಉಲ್ಲೇಖಿದ ಆದೇಶವನ್ನು ಪುನರ್‌ಪರಿಶೀಲಿಸಿ, ಆದೇಶದಲ್ಲಿ ನೀಡಿರುವ ಸೂಚನೆಯಂತೆ 90 ದಿನಗಳೊಳಗೆ ವಿಶೇಷ ಸರ್ವ ಸದಸ್ಯರ ಸಭೆ ಕರೆಯುವ ಅಗತ್ಯವಿಲ್ಲವೆಂದು ತಿಳಿಸುತ್ತಾ ಸದರಿ ಆದೇಶದಲ್ಲಿ ತಿಳಿಸಿರುವ ಕಾರ್ಯಸೂಚಿಗಳನ್ನು, ಸಹಕಾರಿಗಳ ಮುಂಬರುವ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಮಂಡನೆ ಮಾಡಿ ನಿರ್ಣಯ ತೆಗೆದುಕೊಳ್ಳಬಹುದೆಂದು ಸ್ಪಷ್ಟೀಕರಿಸಿದೆ.

(ಡಾ: ಎನ್.ಎಸ್.ಚೆನ್ನಪ್ಪಗೌಡ) 15/4
ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು.

# ಕುಂದುಕೊರತೆಗಳ ನಿವಾರಣೆಗಾಗಿ ಬ್ಯಾಂಕಿಂಗ್ ಒಂಬುಡ್ಸ್‌ಮನ್

ಬ್ಯಾಂಕಿನ ಗ್ರಾಹಕರ ಕುಂದು-ಕೊರತೆಗಳನ್ನು ನಿವಾರಿಸುವ ಸಲುವಾಗಿ ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1935 ಕಲಂ 35ರಡಿ ಬ್ಯಾಂಕಿಂಗ್ ಒಂಬುಡ್ಸ್‌ಮನ್ ಯೋಜನೆಯನ್ನು ಜಾರಿಗೆ ತರಲಾಗಿದೆ.

ಗ್ರಾಹಕರಿಗೆ ಬ್ಯಾಂಕಿಂಗ್ ಸೇವೆಯಲ್ಲಿ ಆಗುವ ಕುಂದು-ಕೊರತೆಗಳಿಂದ ಉದ್ಭವಿಸುವ ವಿವಾದವನ್ನು ಬಗೆಹರಿಸಲು ಭಾರತೀಯ ರಿಸರ್ವ್ ಬ್ಯಾಂಕಿನ ಹಿರಿಯ ಅಧಿಕಾರಿಯನ್ನು ಬ್ಯಾಂಕಿಂಗ್ ಒಂಬುಡ್ಸ್‌ಮನ್ ಆಗಿ ನೇಮಕ ಮಾಡಲಾಗುತ್ತದೆ.

ದೇಶದಲ್ಲಿ ಅಹಮಾದಾಬಾದ್, ಬೆಂಗಳೂರು, ಬೋಪಾಲ್, ಭುವನೇಶ್ವರ, ಚಂಡೀಘಢ್, ಚೆನ್ನೈ, ಗುವಾಹತಿ, ಹೈದರಾಬಾದ್, ಜೈಪುರ್, ಕಾನ್‌ಪುರ ಕೋಲ್ಕತ್ತಾ, ಮುಂಬೈ, ನವದೆಹಲಿ, ಪಾಟ್ನಾ, ತಿರುವನಂತಪುರಗಳಲ್ಲಿ ಬ್ಯಾಂಕಿಂಗ್ ಒಂಬುಡ್ಸ್‌ಮನ್ ಇದೆ.

**ಬೆಂಗಳೂರು ಕಛೇರಿಯ ವಿಳಾಸ ಈ ಕೆಳಗಿನಂತಿದೆ :**

ಭಾರತೀಯ ರಿಸರ್ವ್ ಬ್ಯಾಂಕ್, #10/3/8, ನೃಪತುಂಗ ರಸ್ತೆ, ಬೆಂಗಳೂರು - 560 001. ದೂರವಾಣಿ: 080-22210771/ 22275629 ಫ್ಯಾಕ್ಸ್ :080-22244047.

- **ಬ್ಯಾಂಕಿಂಗ್ ಒಂಬುಡ್ಸ್‌ಮನ್ ವ್ಯಾಪ್ತಿಗೆ ಯಾವ ಯಾವ ಹಣಕಾಸು ಸಂಸ್ಥೆಗಳು ಬರುತ್ತವೆ?**

**ಉತ್ತರ : ಬ್ಯಾಂಕಿಂಗ್ ಒಂಬುಡ್ಸ್‌ಮನ್ ವ್ಯಾಪ್ತಿಗೆ ಎಲ್ಲಾ ಶೆಡ್ಯೂಲ್ ವಾಣಿಜ್ಯ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣಾ ಬ್ಯಾಂಕುಗಳು ಮತ್ತು ಶೆಡ್ಯೂಲ್ಡ್ ಪ್ರಾಥಮಿಕ ಸಹಕಾರಿ ಬ್ಯಾಂಕುಗಳು ಬರುತ್ತವೆ.**

- **ಒಂಬುಡ್ಸ್‌ಮನ್‌ಗೆ ಯಾವ ಯಾವ ವಿಷಯದ ಕುರಿತು ದೂರನ್ನು ನೀಡಬಹುದು?**

1. ಚೆಕ್ ಅಥವಾ ಹುಂಡಿಗಳ ಮೊತ್ತವನ್ನು ಪಾವತಿಸದಿರುವುದು ಅಥವಾ ಅವುಗಳಲ್ಲಿ ಅಸಹಜವಾದ ವ್ಯತ್ಯಯ.
2. ಸಾಕಷ್ಟು ಕಾರಣವಿಲ್ಲದೆ ಸಣ್ಣ ಬೆಲೆಯ ನೋಟುಗಳನ್ನು ಸ್ವೀಕರಿಸಲು ನಿರಾಕರಿಸುವುದು ಮತ್ತು ಸಣ್ಣ ಬೆಲೆಯ ನೋಟುಗಳನ್ನು ಪಡೆಯಲು ಕಮೀಷನ್(ಸೋಡಿ) ಪಡೆಯುವುದು.
3. ಸಾಕಷ್ಟು ಕಾರಣವಿಲ್ಲದೆ ಚಿಲ್ಲರೆ ನಾಣ್ಯಗಳನ್ನು ಸ್ವೀಕರಿಸಲು ನಿರಾಕರಿಸುವುದು ಮತ್ತು ಚಿಲ್ಲರೆ ನಾಣ್ಯಗಳ ಸ್ವೀಕಾರಕ್ಕೆ ಕಮೀಷನ್ (ಸೋಡಿ) ಪಡೆಯುವುದು.
4. ಆಂತರಿಕ ಪಾವತಿಗಳನ್ನು ಮಾಡದಿರುವುದು ಅಥವಾ ಅದರಲ್ಲಿ ವಿಳಂಬ.

5) ಡಿಡಿ, ಪೇ ಆರ್ಡರ್ ಅಥವಾ ಬ್ಯಾಂಕರ್ಸ್ ಚೆಕ್‌ಗಳನ್ನು ನೀಡದಿರುವುದು ಅಥವಾ ನೀಡುವುದಕ್ಕೆ ವಿಳಂಬಿಸುವುದು.

6) ಕಛೇರಿಯ ಕೆಲಸದ ವೇಳೆಯನ್ನು ಪಾಲನೆ ಮಾಡದಿರುವುದು.

7) ಸಾಲ ಮತ್ತು ಮುಂಗಡಗಳನ್ನು ಹೊರತುಪಡಿಸಿ ಬ್ಯಾಂಕ್ ಅಥವಾ ಅದರ ಏಜೆಂಟನು ಲಿಖಿತವಾಗಿ ನೀಡಿದ ಭರವಸೆಯನ್ವಯ ಬ್ಯಾಂಕಿಂಗ್ ಸೇವೆ ನೀಡದಿರುವುದು.

8) ಖಾತೆಗಳಿಗೆ ಹಣವನ್ನು ಜಮಾ ಮಾಡದಿರುವುದು ಅಥವಾ ಅದರಲ್ಲಿ ವಿಳಂಬ, ಠೇವಣಿಯನ್ನು ಪಾವತಿಸದಿರುವುದು, ಉಳಿತಾಯ ಖಾತೆ, ಚಾಲ್ತಿ ಖಾತೆ ಅಥವಾ ಬ್ಯಾಂಕ್ ನಿರ್ವಹಿಸುವ ಇನ್ನಿತರ ಖಾತೆಗಳಿಗೆ ಸಂಬಂಧಿಸಿದಂತೆ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ನು ಪಾಲಿಸದಿರುವುದು.

9) ಭಾರತದ ಹೊರಗೆ ವಾಸವಾಗಿರುವ ಆದರೆ, ಭಾರತದಲ್ಲಿ ಬ್ಯಾಂಕುಗಳಲ್ಲಿ ವ್ಯವಹಾರವನ್ನು ಹೊಂದಿರುವ ನಾಗರೀಕರು ಹೊರದೇಶದಿಂದ ಹಣ ಪಾವತಿ, ಠೇವಣಿ ಮತ್ತು ಇತರ ಬ್ಯಾಂಕಿಂಗ್ ಸೇವೆಗೆ ಸಂಬಂಧಿಸಿದ ದೂರು.

10) ತಿರಸ್ಕರಿಸಲು ಸಾಕಷ್ಟು ಕಾರಣವಿಲ್ಲದೆ ಠೇವಣಿ ಖಾತೆಯನ್ನು ತೆರೆಯಲು ತಿರಸ್ಕರಿಸುವುದು.

11) ಗ್ರಾಹಕರಿಗೆ ಸೂಕ್ತ ತಿಳುವಳಿಕೆ ನೀಡದೆ ಶುಲ್ಕವನ್ನು ವಿಧಿಸುವುದು.

12) ATMಗಳಲ್ಲಿ ಕ್ರೆಡಿಟ್ ಅಥವಾ ಡೆಬಿಟ್ ಕಾರ್ಡ್‌ಗೆ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಭಾರತೀಯ ರಿಸರ್ವ್ ಬ್ಯಾಂಕ್ ನೀಡಿರುವ ಸುತ್ತೋಲೆಯನ್ನು ಬ್ಯಾಂಕ್ ಅಥವಾ ಅದರ ಅಧೀನ ಸಂಸ್ಥೆಗಳು ಪಾಲಿಸದಿರುವುದು.

13) ಪಿಂಚಣಿ ಮೊತ್ತವನ್ನು ಪಾವತಿಸದಿರುವುದು ಅಥವಾ ಪಾತಿಸಲು ವಿಳಂಬಿಸುವುದು (ಬ್ಯಾಂಕಿನ ಕಾರಣದಿಂದ ಈ ಸಮಸ್ಯೆಯು ಉದ್ಭವವಾಗಿರಬೇಕು, ಬ್ಯಾಂಕಿನ ಉದ್ಯೋಗಿಯ ಕಾರಣದಿಂದಲ್ಲ)

14) ಭಾರತೀಯ ರಿಸರ್ವ್ ಬ್ಯಾಂಕ್, ಸರ್ಕಾರ ಅಗತ್ಯಪಡಿಸಿರುವ ತೆರಿಗೆಯನ್ನು ಸ್ವೀಕರಿಸಲು ನಿರಾಕರಿಸುವುದು ಅಥವಾ ವಿಳಂಬಿಸುವುದು.

15) ಸರ್ಕಾರದ ಭದ್ರತಾ ಪತ್ರಗಳನ್ನು ನೀಡಲು ನಿರಾಕರಿಸುವುದು ಅಥವಾ ವಿಳಂಬ ಮಾಡುವುದು ಅಥವಾ ನೀಡಲು ವಿಫಲವಾಗುವುದು ಅಥವಾ ಸೇವೆಯನ್ನು ನೀಡಲು ವಿಳಂಬ ಮಾಡುವುದು.

16) ಸೂಚನೆ ನೀಡದೆ ಅಥವಾ ಸಾಕಷ್ಟು ಕಾರಣವಿಲ್ಲದೆ ಠೇವಣಿ ಖಾತೆಯನ್ನು ಬಲವಂತವಾಗಿ ಮುಚ್ಚುವುದು.

17) ಖಾತೆಗಳನ್ನು ಮುಕ್ತಾಯಗೊಳಿಸಲು ನಿರಾಕರಿಸುವುದು ಅಥವಾ ವಿಳಂಬ ಮಾಡುವುದು.

18) ಬ್ಯಾಂಕ್ ಅಳವಡಿಸಿಕೊಂಡಿರುವ ನ್ಯಾಯೋಚಿತ ಪದ್ಧತಿಗಳ ಪಾಲನೆ ಮಾಡದಿರುವುದು ಅಥವಾ ಬ್ಯಾಂಕಿಂಗ್ ಕೋಡ್ಸ್ ಮತ್ತು ಸ್ಟ್ಯಾಂಟರ್ಡ್ ಬೋರ್ಡ್ ಆಫ್ ಇಂಡಿಯಾದ ನಿಯಮಗಳನ್ನು ಪಾಲನೆ ಮಾಡದಿರುವುದು.

19) ಸಾಲ ವಸೂಲಾತಿಗೆ ಏಜೆಂಟರನ್ನು ನೇಮಕ ಮಾಡಿಕೊಳ್ಳುವಾಗ ಭಾರತೀಯ ರಿಸರ್ವ್ ಬ್ಯಾಂಕ್ ನೀಡಿರುವ ಮಾರ್ಗಸೂಚಿಯ ಉಲ್ಲಂಘನೆ.

20) ಬ್ಯಾಂಕಿಂಗ್ ಮತ್ತು ಇತರೆ ಸೇವೆಗಳಿಗೆ ಸಂಬಂಧಿಸಿದಂತೆ ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಯ ಉಲ್ಲಂಘನೆ. ಗ್ರಾಹಕರು ಠೇವಣಿ ಮತ್ತು ಸಾಲಗಳಿಗೆ ಸಂಬಂಧಿಸಿದಂತೆ ಈ ಕೆಳಗೆ ತಿಳಿಸಿದ ತೊಂದರೆಗಳಿಗೋಸ್ಕರವೂ ಸಹ ಒಂಬುಡ್ಸ್‌ಮನ್‌ಗೆ ದೂರು ನೀಡಬಹುದು.

1. ಬಡ್ಡಿಗಳಿಗೆ ಸಂಬಂಧಿಸಿದಂತೆ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳ ಉಲ್ಲಂಘನೆಗೆ
2. ಸಾಲದ ಅರ್ಜಿಗಳನ್ನು ನಿಗದಿತ ಸಮಯದ ಒಳಗೆ ವಿಲೇವಾರಿ ಮಾಡದಿರುವುದು ಅಥವಾ ಸಾಲದ ಅರ್ಜಿಗಳನ್ನು ವಿಲೇವಾರಿ ಮಾಡಲು ಇರುವ ಸಮಯಾವಕಾಶವನ್ನು ಗಮನಿಸದಿರುವುದಕ್ಕೆ.
3. ಕಾಲ-ಕಾಲಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ ಯಾವುದೇ ವಿಷಯದ ಕುರಿತು ನೀಡಿರುವ ಸುತ್ತೋಲೆಯನ್ನು ಪಾಲಿಸದಿರುವುದು.
4. ಭಾರತೀಯ ರಿಸರ್ವ್ ಬ್ಯಾಂಕ್ ನಿಗದಿಪಡಿಸುವ/ ನಿರ್ದೇಶಿಸುವ ಇನ್ಯಾವುದೇ ವಿಷಯಗಳು.

- **ಬ್ಯಾಂಕಿಂಗ್ ಒಂಬುಡ್ಸ್‌ಮನ್‌ಗೆ ಯಾವಾಗ ದೂರು ನೀಡಬಹುದು?**

ದೂರುದಾರರು ಬ್ಯಾಂಕಿನ ಸೇವೆಯಿಂದ ತಮಗೆ ಆಗಿರುವ ಕುಂದುಕೊರತೆ, ತೊಂದರೆಗಳ ಕುರಿತು ಮೊದಲು ಬ್ಯಾಂಕಿಗೆ ದೂರನ್ನು ನೀಡತಕ್ಕದ್ದು, ಬ್ಯಾಂಕ್ ಒಂದು ತಿಂಗಳೊಳಗಾಗಿ ಸದರಿ ದೂರನ್ನು ಬಗೆಹರಿಸದಿದ್ದಲ್ಲಿ ಅಥವಾ ಬ್ಯಾಂಕ್ ನೀಡುವ ಉತ್ತರವು ಗ್ರಾಹಕನಿಗೆ ತೃಪ್ತಿಕರವಾಗಿರದಿದ್ದಲ್ಲಿ ಒಂಬುಡ್ಸ್‌ಮನ್‌ಗೆ ದೂರು ನೀಡಬಹುದು. ಬ್ಯಾಂಕಿಗೆ ಮೊದಲು ದೂರನ್ನು ನೀಡದೆ ನೇರವಾಗಿ ಒಂಬುಡ್ಸ್‌ಮನ್‌ಗೆ ದೂರನ್ನು ನೀಡುವಂತಿಲ್ಲ.

ಈ ಕೆಳಗಿನ ಸಂದರ್ಭದಲ್ಲಿ ಒಂಬುಡ್ಸ್‌ಮನ್ ದೂರನ್ನು ವಿಚಾರಣೆಗೆ ಪರಿಗಣಿಸುವುದಿಲ್ಲ.

20ನೇ ಪುಟಕ್ಕೆ...

# ಶರಣಧರ್ಮ ಮತ್ತು ಸಹಕಾರಿ ತತ್ವಗಳು



ಎಚ್.ಶಿವಕುಮಾರ್
ಚಾರ್ಟೆರ್ಡ್ ಅಕೌಂಟೆಂಟ್

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಅಧ್ಯಾಯ 10ರಲ್ಲಿ 67ನೇ ಕಲಮಿನಡಿ ಸಹಕಾರಿ ತತ್ವಗಳು ಯಾವುವು ಎಂದು ಹೇಳಲಾಗಿದೆ. ಅವುಗಳನ್ನು ಸರಳವಾಗಿ ಹೀಗೆ ಪಟ್ಟಿ ಮಾಡಬಹುದು. 1) ಲಿಂಗಬೇಧವಿಲ್ಲದ ತಾರತಮ್ಯವಿರದ ಸ್ವಯಂ ಸೇವೆ, 2) ಪ್ರಜಾಸತ್ತಾತ್ಮಕ ಸಂಸ್ಥೆಯ ಸ್ವರೂಪ, 3) ಸಾಮೂಹಿಕ ಸಂಪನ್ಮೂಲ ಸಂಘಟನೆ, 4) ಸ್ವಾಯತ್ತ ಸ್ವ–ಸಹಾಯದ ಪರಿಕಲ್ಪನೆ, 5) ಶಿಕ್ಷಣ ಮತ್ತು ನಿರಂತರ ತರಬೇತಿ, 6) ಆಂದೋಲನ ಮಾದರಿಯ ಪ್ರಜ್ಞೆ ಮತ್ತು ಪರಿಸರ.

ಈ ಪಟ್ಟಿಯಲ್ಲಿ ಬರುವ ಪ್ರತಿಯೊಂದು ಅಂಶಗಳನ್ನು ಅವು ಸೃಷ್ಟಿಸುವ ಸನ್ನಿವೇಶದ ಅರ್ಥದಲ್ಲಿ ಗಮನಿಸಿ. ಒಂದು ರೀತಿಯ ಸಾತ್ವಿಕ ಚಿಂತನೆಯ ನೆಲೆಯಲ್ಲಿ ಸಹಬಾಳ್ವೆಯ ಕಲ್ಪನೆಯಲ್ಲಿ ಹಲವು ಸಮಾನ ಮನಸ್ಕ ಜನರು ಒಂದೆಡೆ ಸೇರಿ, ವೈಚಾರಿಕತೆಯ ಹಿನ್ನಲೆಯೊಂದಿಗೆ ಜೀವನದ ಎಲ್ಲಾ ಮಗ್ಗುಲುಗಳನ್ನು ವಿಶ್ಲೇಶಿಸುತ್ತಾ ಸಮತೆಯ ಆಂದೋಲನದ ಹರಿಕಾರರಾಗಿ ಸಮಾಜವನ್ನು ಆರ್ಥಿಕವಾಗಿ ಮತ್ತು ಆರೋಗ್ಯಕರವಾಗಿ ಮುನ್ನಡೆಸುವಂತಹ ಪರಿಸರ ಸೃಷ್ಟಿಯಾದಂತೆ ಕಂಡುಬರುತ್ತದೆ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಪುಸ್ತಕದ ಪುಟಗಳನ್ನು ತಿರುಗಿಸುತ್ತಾ ಹೋದಂತೆ ಹತ್ತನೇ ಅಧ್ಯಾಯಕ್ಕೆ ಬಂದು ಸಹಕಾರಿ ತತ್ವಗಳನ್ನು ಓದುತ್ತಾ ಇರುವಾಗ ಅವುಗಳ ಆಶಯ ದರ್ಶನಗಳನ್ನು ಮನನ ಮಾಡಿದಾಗ ಆಹ್ಲಾದಕರವಾದ ಸಿಂಚನವಾಗುತ್ತದೆ.

ಹಿರಿಯ ಕನ್ನಡ ವಿದ್ವಾಂಸ ದಿವಂಗತ ಎಂ.ಆರ್. ಶ್ರೀನಿವಾಸಮೂರ್ತಿ ಯವರು 1944ರಲ್ಲಿ ಬರೆದ ವಚನ ಸಾಹಿತ್ಯ ಕುರಿತಾದ ವಚನಧರ್ಮಸಾರ ಎಂಬ ಪುಸ್ತಕದ ಪ್ರಥಮ ಪ್ಯಾರಾದಲ್ಲಿ ದಾಖಲಿಸಿರುವುದು ಇಲ್ಲಿ ಉಲ್ಲೇಖನೀಯ. “ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ವಿಹರಿಸುತ್ತಾ ಬರುವಾಗ ಒಂದು ಕಡೆ ತಪೋವನವನ್ನು ಪ್ರವೇಶಿಸಿದಂತೆ ದಿವ್ಯವಾದ ಆನಂದಾನುಭವ ಉಂಟಾಗುತ್ತದೆ. ತಪೋವನದ ಸಹಜ ಶಾಂತಿ, ಪರಸ್ಪರ ಪ್ರೇಮ, ಸಮತಾಭಾವ ಸ್ವಾತಂತ್ರ್ಯ ಇವು ಮೂರ್ತಿಮತ್ತಾಗಿ ಕಾಣುತ್ತದೆ. ವಚನಸಾಹಿತ್ಯವೇ ತಪೋವನದ ಈ ಉಪನಿಷತ್ ಸಾಹಿತ್ಯ, ವಚನಕಾರರೇ ಮಹರ್ಷಿಗಳು. ಇಲ್ಲಿ ರಹಸ್ಯಗಳು ಮುಚ್ಚುಮರೆಗಳೂ ಇಲ್ಲ. ವರ್ಣವ್ಯತ್ಯಾಸಗಳಿಂದಾಗಲಿ ಲಿಂಗಭೇದದಿಂದಾಗಲಿ ಅಧಿಕಾರಿ ಅನಧಿಕಾರಿ ಎಂಬ ತಾರತಮ್ಯವಿಲ್ಲ. ಎಲ್ಲರ ಮುಂದಿನ ಪ್ರಶ್ನೆಯೂ ಒಂದೇ, ಅದಕ್ಕೆ ಉತ್ತರವೂ ಒಂದೇ”.

ದಾರ್ಶನಿಕರು ಕನ್ನಡ ಸಾಹಿತ್ಯದಲ್ಲಿ ವಚನಸಾಹಿತ್ಯವನ್ನು ಕಂಡ ಬಗೆ ಇದು. ಹಾಗೆಯೇ ಇಡೀ ಸಹಕಾರಿ ಆಂದೋಲನದಲ್ಲಿ ಸಹಕಾರಿ ತತ್ವಗಳು ತಪೋವನದ ಪ್ರಶಾಂತತೆಯನ್ನು ಮತ್ತು ಪಾವಿತ್ರ್ಯತೆಯನ್ನು ಉಪನಿಷತ್ತಿನ ಮಂತ್ರಗಳಂತೆ ಪ್ರತ್ಯಕ್ಷಗೊಳಿಸುತ್ತವೆ. ಮೇಲೆ ಪಟ್ಟಿ ಮಾಡಿದ ಸಹಕಾರಿ ತತ್ವಗಳನ್ನು ಶ್ರೀನಿವಾಸಮೂರ್ತಿಯವರು ವಿಶ್ಲೇಷಿಸಿರುವ ವಚನಸಾಹಿತ್ಯದ ಆಂತರ್ಯದೊಂದಿಗೆ ತುಲನೆ ಮಾಡಿದಾಗ ಸಹಕಾರಿ ತತ್ವಗಳು ಶರಣಚಿಂತನೆಯ ಪರಿಷ್ಕೃತ ಪಠ್ಯಗಳು ಎಂಬಂತೆ ಭಾಸವಾಗುತ್ತದೆ.

ಹನ್ನೆರಡನೆಯ ಶತಮಾನದ ಶರಣರ ಕಾಲದಲ್ಲಿ ಬಡವರು, ದೀನದಲಿತರು, ಶೋಷಿತರು ಮತ್ತು ಮಹಿಳೆಯರು ಎಂಬ ತಾರತಮ್ಯವಿಲ್ಲದ ಸಮಾಜದ ರಚನೆಯ ಕಲ್ಪನೆ ಗರಿಗಟ್ಟಿತ್ತು. ಈ ಕಲ್ಪನೆ ಬರೀ ಕಾಲ್ಪನಿಕವಾಗಿ ಉಳಿಯದೆ ಅನುಷ್ಠಾನಕ್ಕೆ ಬಂದು ಸಮಾಜದ ಎಲ್ಲಾ ವರ್ಗದ ಜನರೂ ತಾರತಮ್ಯವಿಲ್ಲದೆ ಒಂದುಗೂಡಿ ಸಮಾಜ ಸೇವೆಯಲ್ಲಿ ಭಾಗಿಯಾದ ಬಗ್ಗೆ ಇತಿಹಾಸವಿದೆ.

ಜಾತಿಬೇಧ, ಲಿಂಗಬೇಧವಿಲ್ಲದೆ ಎಲ್ಲರೂ ಒಟ್ಟಾಗಿ “ಶರಣ” ಎಂಬ ಸಮೂಹದಡಿ ಸಂಘಟಿತರಾಗಿ ತಮ್ಮ ತಮ್ಮ ವೃತ್ತಿಯಲ್ಲಿ ತೊಡಗಿ, ದುಡಿದು ಗಳಿಸಿ ಮಿಕ್ಕಿದ್ದನ್ನು ದಾಸೋಹದ ಹೆಸರಿನಲ್ಲಿ ಪರಸ್ಪರ ಹಂಚಿಕೊಂಡು ಜೀವಿಸಿದ ದಾಖಲೆ ಇಂದಿನ ಸಹಕಾರಿ ತತ್ವಗಳಿಗೆ ತಳಹದಿಯಾಗಿದೆ ಎಂದೆನಿಸುತ್ತದೆ. ಶರಣರು ತಮ್ಮ ವೃತ್ತಿಯಲ್ಲಿ ತೊಡಗಿ ಕಾಯಕವೇ ಕೈಲಾಸ ಎನ್ನುತ್ತಾ ದುಡಿದು ಸಂಗ್ರಹಿಸಿದ್ದೇ ಶರಣ ಸಂಸ್ಕೃತಿಯ ಶೇರು ಬಂಡವಾಳವಾಗಿ, ದಾಸೋಹದ ರೂಪದಲ್ಲಿ ಹಂಚಿಕೆ ಮಾಡಿಕೊಂಡ ಉತ್ಪನ್ನವೇ ಡಿವಿಡೆಂಡ್ ಆಗಿ ಅಂದು ಕೆಲಸ ಮಾಡಿದ ವೈಖರಿ ಇಂದಿನ ಸಹಕಾರಿ ಚಳುವಳಿಯಲ್ಲಿ ಮೈತಾಳಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ಸಾಮೂಹಿಕ ಸಂಪನ್ಮೂಲ ಸಂಘಟನೆಯ ವಿಚಾರಕ್ಕೆ ಬಂದರೆ ಬಸವಣ್ಣ ರಚಿಸಿದ ಈ ವಚನ ಇಡೀ ಸಹಕಾರಿ ತತ್ವಕ್ಕೆ ಬರೆದ ಭಾಷ್ಯದಂತೆ ಒಂದು ಸುಂದರ ಚಿತ್ರದ ಹಾಗೆ ಕಣ್ಮುಂದೆ ಮೂಡುತ್ತದೆ.

ಕಾಗೆಯೊಂದಗುಳ ಕಂಡರೆ
ಕರೆಯದೆ ತನ್ನ ಬಳಗವನು
ಕೋಳಿಯೊಂದು ಗುಟುಕು ಕಂಡರೆ
ಕೂಗಿ ಕರೆಯದೆ ತನ್ನ ಕುಲವೆಲ್ಲವ

ಕಾಗೆ, ಕೋಳಿಯ ಉದಾಹರಣೆ ನೀಡುತ್ತಾ ಸಂಪನ್ಮೂಲವನ್ನು ಸಂಘಟಿಸಿ ಸಾಮೂಹಿಕವಾಗಿ ಅದರ ಉಪಯುಕ್ತತೆಯನ್ನು ಸಹಜೀವಿಗಳೊಂದಿಗೆ ಹಂಚಿಕೊಳ್ಳುವ ಬಸವಣ್ಣನ ಸಲಹೆ ಮತ್ತು ಆಶಯ ಇಂದಿನ ಸಹಕಾರಿ ಆಂದೋಲನದ ಅತಿ ಮುಖ್ಯ ತತ್ವಗಳಲ್ಲಿ ಒಂದು. ಸಹಕಾರಿ ವಲಯದಲ್ಲಿ ಸಾಮೂಹಿಕವಾಗಿ ಸಂಪನ್ಮೂಲ ಸಂಘಟನೆ ಮತ್ತು ಅದರ ಸದುಪಯೋಗಿ ಸ್ವರೂಪದ ಕಾರಣಕ್ಕಾಗಿಯೇ ಸರ್ಕಾರ ಆದಾಯ ತೆರಿಗೆಯಿಂದ ಸಹಕಾರಿ ವಲಯಕ್ಕೆ ವಿನಾಯಿತಿ ನೀಡಿದೆ.

ಇಡೀ ಶರಣ ಸಂಸ್ಕೃತಿಯು ಪ್ರಜಾಸತ್ತಾತ್ಮಕ ರೂಪದಲ್ಲಿ, ಪರಾವಲಂಬನೆಯಿಲ್ಲದೆ ಕಾಯಕಯೋಗದಲ್ಲಿ ಸಂಪೂರ್ಣ ಸ್ವ–ಸಹಾಯದ ಬಲದಿಂದ ಬೆಳೆದು ವಿಶ್ವದ ಇತಿಹಾಸದಲ್ಲೇ ಹನ್ನೆರಡನೆಯ ಶತಮಾನದ ಈ ಚಟುವಟಿಕೆಯನ್ನು ಆಂದೋಲನದ ರೀತಿಯಲ್ಲಿ ಬೆಳೆಸಿಕೊಂಡು ಬಂದದ್ದು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಚರ್ಚಿತವಾಗಿದೆ. ಹನ್ನೆರಡನೆಯ ಶತಮಾನದಲ್ಲಿ ಶರಣರು ಹುಟ್ಟು ಹಾಕಿದ ಸಹಜೀವನದ ಕಲ್ಪನೆಯೇ ಇಂದು ಸಹಕಾರಿ ತತ್ವಗಳಾಗಿ ಮೈದಳೆದಿವೆ. ಅನುಭವ ಮಂಟಪ ಎಂಬ ವೇದಿಕೆಯ ಮೂಲಕ ಶರಣರಿಗೆ ನಿರಂತರವಾಗಿ ಸಾಂಸ್ಕೃತಿಕ, ಸಾಹಿತ್ಯಕ, ಧಾರ್ಮಿಕ ಶಿಕ್ಷಣ ಮತ್ತು ತರಬೇತಿಯನ್ನು ನೀಡುತ್ತಾ ಅಂದು ಆಂದೋಲನ ಪ್ರಜ್ಞೆಯನ್ನು ಸದಾ ಜಾಗೃತವಾಗಿಟ್ಟಿದ್ದುದು ಇಂದಿನ ಸಹಕಾರಿ ಚಟುವಟಿಕೆಗಳಿಗೆ ಅನುಗುಣವಾಗಿದೆ.

ಎಂ.ಆರ್.ಶ್ರೀನಿವಾಸಮೂರ್ತಿಗಳ ಮಾತಿನಲ್ಲೇ ಹೇಳುವು ದಾದರೆ “ಶರಣಧರ್ಮ ದೀಕ್ಷೆಯ ಮೂಲಕ ಯಾರನ್ನಾದರೂ ಭಕ್ತರನ್ನಾಗಿ ಮಾಡಿ ತನ್ನಲ್ಲಿ ಸೇರಿಸಿಕೊಳ್ಳುತ್ತದೆ. ಅವರ ನೀತಿಯ ಮಟ್ಟ ಏರುವಂತೆ ಸದಾಚಾರಗಳ ಶಿಕ್ಷಣವನ್ನು ಒದಗಿಸುತ್ತದೆ. ಪ್ರತಿಯೊಬ್ಬರೂ ಕಾಯಕವನ್ನು ಮಾಡಬೇಕು ಎಂದು ಹೇಳಿ ಕಾಯಕಕ್ಕೆ ಮಹತ್ವವನ್ನು ಕೊಟ್ಟಿರುವುದರಿಂದ ದುಡಿಮೆಗೆ ಗೌರವವೂ ದೊರೆತು ಸಮಾಜದ ಆರ್ಥಿಕ ಸ್ಥಿತಿ ಬಲಪಡುತ್ತದೆ. ಸಮಾಜ ಯಾವುದಕ್ಕೂ ಪರಾವಲಂಬಿಯಾಗಬೇಕಾದುದಿಲ್ಲ. ವಚನಧರ್ಮದ ಸಮಾಜ ಹೀಗೆ ಒಂದು ರೀತಿಯಲ್ಲಿ ದೊಡ್ಡ ಸಹಕಾರ ಸಂಘ”. ಇದೇ ಮೇ 13ರಂದು ಆಚರಿಸಲ್ಪಡುತ್ತಿರುವ ಬಸವ ಜಯಂತಿಯ ಸಂದರ್ಭದಲ್ಲಿ ಈ ಮೇಲಿನ ಮಾತುಗಳು ಸ್ಮರಣೀಯವಾಗುತ್ತವೆ. ■

# ಸಹಕಾರಿ ಸಂಸ್ಥೆಗಳಲ್ಲಿ ವೃತ್ತಿಪರತೆ

– ಬಿ.ಎ. ಮಹದೇವಪ್ಪ



ವೃತ್ತಿಯಲ್ಲಿ ಪರಿಣಿತಿಯನ್ನು ಹೊಂದುವುದಕ್ಕೆ ವೃತ್ತಿಪರತೆ ಎನ್ನಲಾಗುತ್ತದೆ. ಇದಕ್ಕೆ ಒಂದು ಸೂಕ್ತ ಉದಾಹರಣೆ ಇಲ್ಲಿದೆ...

ರಸ್ತೆಯಲ್ಲಿ ಹೋಗುತ್ತಿದ್ದ ಕಾರು ಇದ್ದಕ್ಕಿದ್ದಂತೆ ನಿಂತು ಬಿಡುತ್ತದೆ. ಕಾರಿನ ಮಾಲೀಕರು ಫೋನ್ ಮಾಡಿ ಮೆಕಾನಿಕ್‌ನನ್ನು ಕರೆಸಿಕೊಳ್ಳುತ್ತಾರೆ. ಮೆಕಾನಿಕ್ ಕಾರಿನ ಬಾನೆಟ್ ಎತ್ತಿ ಸ್ವಲ್ಪ ಹೊತ್ತು ಇಂಜಿನನ್ನು ಪರಿಶೀಲಿಸಿ, ತನ್ನ ಕಿಟ್‌ನಿಂದ ಸಣ್ಣ ಸುತ್ತಿಗೆಯನ್ನು ತೆಗೆದುಕೊಂಡು, ಇಂಜಿನ್ ಪಕ್ಕ ಒಂದು ಏಟು ಹೊಡೆದು "ಕಾರ್ ಸ್ಟಾರ್ಟ್ ಮಾಡಿ ಸಾರ್" ಎನ್ನುತ್ತಾನೆ. ಕಾರು ಸ್ಟಾರ್ಟ್ ಆಗುತ್ತದೆ. ಕಾರಿನ ಮಾಲೀಕರು "ಎಷ್ಟು ಕೊಡಬೇಕು?" ಎನ್ನುತ್ತಾರೆ. "ನೂರು ರೂಪಾಯಿ" ಎನ್ನುತ್ತಾನೆ ಮೆಕಾನಿಕ್. ಮಾಲೀಕರು ಸ್ವಲ್ಪ ಸಿಟ್ಟಿನಿಂದ "ಅಲ್ಲಪ್ಪ, ಏನು ಕೆಲಸ ಮಾಡಿದೆ ಅಂತ ನೂರು ರೂಪಾಯಿ ಕೊಡಬೇಕು. ಸಣ್ಣ ಸುತ್ತಿಗೆಯಿಂದ ಒಂದು ಏಟು ಹಾಕಿದ್ದಕ್ಕೆ ನೂರು ರೂಪಾಯಿ ಕೇಳ್ತಾ ಇರೋದು ತುಂಬಾ ಜಾಸ್ತಿ" ಎಂದು ಹೇಳುತ್ತಾರೆ. ಆಗ ಮೆಕಾನಿಕ್ "ಸಾರ್, ಏಟು ಹಾಕಿದ್ದಕ್ಕೆ ಕೇವಲ 5 ರೂ. ಕೊಡಿ. ಆದರೆ ಇಂಜಿನ್ ಪಕ್ಕದಲ್ಲಿ ಯಾವ ಜಾಗಕ್ಕೆ ಹೊಡೆಯಬೇಕು ಎಂದು ಅಂದಾಜಿಸಿ, ಅದೇ ಜಾಗಕ್ಕೆ ಹೊಡೆದನಲ್ಲ... ಅದಕ್ಕೆ 95 ರೂ. ಕೊಡಿ" ಎನ್ನುತ್ತಾನೆ.

ಇದನ್ನೇ "ವೃತ್ತಿಪರತೆ" ಎನ್ನುತ್ತೇವೆ.

ಈ ಹಿನ್ನೆಲೆಯಲ್ಲಿ ಡಾಕ್ಟರ್, ಟೀಚರ್, ಲಾಯರ್, ಇಂಜಿನಿಯರ್, ಪೈಲಟ್, ಸೇಲ್ಸ್‌ಮನ್, ಟೆಕ್ನೀಷಿಯನ್, ಬ್ಯಾಂಕರ್, ಫಿಷಿಯೋಥೆರಪಿಸ್ಟ್– ಮುಂತಾದ ವೃತ್ತಿಪರರು ತಮ್ಮ ಕೆಲಸಗಳಲ್ಲಿ ಪರಿಣಿತಿಯನ್ನು ಹೊಂದಿರುವುದನ್ನು ವೃತ್ತಿಪರತೆ ಎಂದು ಕರೆಯಲಾಗುತ್ತದೆ.

ಒಂದು ಕೆಲಸಕ್ಕೆ ಸಂಬಂಧಿಸಿದಂತೆ ಅರ್ಹತೆ, ತರಬೇತಿ ಮತ್ತು ಅನುಭವವನ್ನು ಹೊಂದಿರುವವರಲ್ಲಿ ವೃತ್ತಿಪರತೆ ಕಂಡುಬರುತ್ತದೆ.

ವೃತ್ತಿಪರತೆ ಎಂಬ ಪದವನ್ನು ಇಂಗ್ಲೀಷಿನ ಪ್ರೊಫೆಷನಲೈಜೇಷನ್ ಎಂಬ ಪದಕ್ಕೆ ಬದಲಾಗಿ ಉಪಯೋಗಿಸಲಾಗುತ್ತಿದೆ. ಪ್ರೊಫೆಷನಲೈಜೇಷನ್ ಪದವು ಲ್ಯಾಟಿನ್ ಭಾಷೆಯ ಪ್ರೊಫೆಷಿಯೊ ಎಂಬ ಪದದಿಂದ ಬಳಕೆಗೆ ಬಂದಿದೆ. ಪ್ರೊಫೆಷಿಯೋ "ಪ್ರಮಾಣ" ಎಂಬ ಅರ್ಥವನ್ನು ಸೂಚಿಸುತ್ತದೆ. ಯಾವುದೇ ವೃತ್ತಿಯನ್ನು ಆರಂಭಿಸುವ ಮುನ್ನ ಆ ವೃತ್ತಿಯನ್ನು ಪ್ರಾಮಾಣಿಕವಾಗಿ, ಬದ್ಧತೆಯಿಂದ ಮಾಡುತ್ತೇನೆಂದು ವಚನ ಕೈಗೊಳ್ಳುವುದಕ್ಕೆ ಪ್ರೊಫೆಷಿಯೊ ಎಂದು ಕರೆಯುತ್ತಾರೆ. ಈ ಹಿನ್ನೆಲೆಯಲ್ಲಿ ವೃತ್ತಿಪರತೆ ಎಂಬುದು ನಾವು ಮಾಡುವ ಕೆಲಸದಲ್ಲಿ ಕೇವಲ ಪರಿಣಿತಿಯನ್ನು ಹೊಂದಿದ್ದರೆ ಸಾಕಾಗುವುದಿಲ್ಲ. ಅದಕ್ಕೂ ಮೀರಿ ಇತರೆ ಪ್ರಮುಖ ಅಂಶಗಳನ್ನು ಹೊಂದಿರಬೇಕಾಗುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ.

ವೃತ್ತಿಪರತೆ ಎಲ್ಲದಕ್ಕೂ ಮೊದಲು ಪ್ರಾಮಾಣಿಕತೆಯನ್ನು ಕೇಳುತ್ತದೆ...

Professionally qualified people who are not honest cannot ever be considered professionals ಎಂಬ ಮಾತೊಂದಿದೆ.

ಒಬ್ಬ ಜನಪ್ರಿಯ ವೈದ್ಯ ತನ್ನ ವೃತ್ತಿಯಲ್ಲಿ ಎಷ್ಟೇ ಪರಿಣಿತನಾಗಿದ್ದರೂ... ಆತ ಕಿಡ್ನಿ ಅಪಹರಣದಲ್ಲಿ ಭಾಗಿಯಾಗುವುದಾದರೆ..?

ಒಬ್ಬ ಸಮರ್ಥ ವಕೀಲ ತನ್ನ ಕಕ್ಷಿದಾರನ ಮಾಹಿತಿಯನ್ನು... ಪ್ರತಿವಾದಿ ವಕೀಲರೊಂದಿಗೆ ಹಂಚಿಕೊಂಡರೆ..?

ಒಬ್ಬ ಪ್ರತಿಭಾವಂತ ವಿಜ್ಞಾನಿ ತನ್ನ ದೇಶದ ರಕ್ಷಣಾ ರಹಸ್ಯಗಳನ್ನು... ಇನ್ನೊಂದು ದೇಶಕ್ಕೆ ಮಾರಿದರೆ...?

ಇವರುಗಳನ್ನು ವೃತ್ತಿಪರರು ಅಥವಾ ಇವರ ಪರಿಣಿತಿಯನ್ನು ವೃತ್ತಿಪರತೆ ಎಂದು ಕರೆಯಬಹುದೆ...?

ಎರಡನೆಯದಾಗಿ ವೃತ್ತಿಪರತೆ ಬದ್ಧತೆಯನ್ನು ಆಧರಿಸಿದೆ. ಕೆಲಸದಲ್ಲಿ ಬದ್ಧತೆ ಇಲ್ಲದಿದ್ದಲ್ಲಿ ವೃತ್ತಿಪರತೆ ಎಂದೆಂದಿಗೂ ಸಾಧ್ಯವಿಲ್ಲ. ಕೆಲಸದಲ್ಲಿ ಆಸಕ್ತಿ, ಉತ್ಸಾಹ, ಕಲಿಯುವ ಇಚ್ಛೆ, ಕೆಲಸ ಮಾಡುವ ಸಂಸ್ಥೆಯ ಬಗ್ಗೆ ನಿಷ್ಠೆ– ಇವೆಲ್ಲವೂ ಕೆಲಸದ ಬದ್ಧತೆಯನ್ನು ಸೂಚಿಸುತ್ತವೆ. ಕೆಲಸಕ್ಕೆ ಸೇರುವ ದಿನ ಇದ್ದ ಆಸಕ್ತಿ, ಉತ್ಸಾಹಗಳು... ಆ ಕೆಲಸದಿಂದ ನಿವೃತ್ತಿಯ ದಿನದವರೆಗೂ ಇರುವುದನ್ನು ಬದ್ಧತೆ ಎನ್ನಬಹುದು. ವಹಿಸಿದ ಕೆಲಸವನ್ನು ಸಮರ್ಪಕವಾಗಿ ಮಾಡಿ ಮುಗಿಸುವುದು ಇದರ ಲಕ್ಷಣ.

ಒಬ್ಬ ಶಿಲ್ಪಿ ಒಂದು ದೇವರ ವಿಗ್ರಹವನ್ನು ಬಹಳ ಸುಂದರವಾಗಿ ಕೆತ್ತಿದ್ದಾನೆ. ನೋಡಿದವರೆಲ್ಲರೂ ಅದ್ಭುತವಾಗಿ ಮೂಡಿಬಂದಿದೆ ಎಂದು ಹೊಗಳುತ್ತಿದ್ದಾರೆ. ಆದರೆ ಆ ಶಿಲ್ಪಿಯು ತನ್ನ ಕೆಲಸವನ್ನು ನಿಲ್ಲಿಸದೆ, ಆ ವಿಗ್ರಹದ ಹಿಂದೆಯೂ ಏನನ್ನೋ ಮಾಡುತ್ತಿದ್ದಾನೆ. ಆಗ ಒಬ್ಬ ಕೇಳುತ್ತಾನೆ... "ವಿಗ್ರಹ ಬಹಳ ಚೆನ್ನಾಗಿದೆ. ಅದರ ಹಿಂದೆ ಏನು ಮಾಡುತ್ತಿದ್ದೀರಿ?" ಅದಕ್ಕೆ ಶಿಲ್ಪಿ... "ವಿಗ್ರಹದ ಬೆನ್ನನ್ನು ಅಷ್ಟೇ ಚೆನ್ನಾಗಿ ಕೆತ್ತುತ್ತಿದ್ದೇನೆ" ಎಂದು ಹೇಳುತ್ತಾನೆ. "ಅಲ್ಲ ಸ್ವಾಮಿ, ಎಲ್ಲರೂ ವಿಗ್ರಹದ ಮುಂದೆ ನೋಡುತ್ತೇವೆ. ವಿಗ್ರಹದ ಮುಂದೆ ಪೂಜೆ ಮಾಡುತ್ತೇವೆ. ಯಾರೂ ವಿಗ್ರಹದ ಬೆನ್ನನ್ನು ನೋಡುವುದಿಲ್ಲ. ನೀವು ಏಕೆ ಸುಮ್ಮನೆ ಟೈಮ್ ಕಳೆಯುತ್ತಿದ್ದೀರಿ?" ಎಂದು ಇನ್ನೊಬ್ಬ ವ್ಯಕ್ತಿ ಹೇಳಿದಾಗ ಶಿಲ್ಪಿ ಏನು ಹೇಳಿದ ಗೊತ್ತೇ?... "ಹೌದು... ನೀವು ಹೇಳುವುದು ಸರಿ. ಯಾರೂ ವಿಗ್ರಹದ ಬೆನ್ನನ್ನು ನೋಡುವುದಿಲ್ಲ. ಆದರೆ.. "ದೇವರು ನೋಡುತ್ತಾನೆ...!"

An amateur needs supervision; A professional can work unsupervised

ಇಂತಹ ಮನಃಸ್ಥಿತಿ ಬಂದಾಗ ಮಾತ್ರ... ಅದು ಬದ್ದತೆ ಎನಿಸುತ್ತದೆ. ಬದ್ಧತೆ ವೃತ್ತಿಪರತೆಯ ಇನ್ನೊಂದು ಮೆಟ್ಟಿಲು.

ಪ್ರಾಮಾಣಿಕತೆ ಮತ್ತು ಬದ್ಧತೆಯ ನಂತರ ವೃತ್ತಿಪರತೆಯಲ್ಲಿ ಬರುವ

ಮೂರನೇ ಅಂಶ ಸಮಯಪಾಲನೆ. ವಿಶ್ವದ ನಂ.1 ಶ್ರೀಮಂತನಿಗೆ ದಿನವೊಂದಕ್ಕೆ 24 ಗಂಟೆಗಳು ಅದೇ ರೀತಿ ಭಿಕ್ಷೆ ಬೇಡುವವನಿಗೂ 24 ಗಂಟೆಗಳು. ಯಾರಿಗೂ ಹೆಚ್ಚಿಲ್ಲ... ಯಾರಿಗೂ ಕಡಿಮೆಯಿಲ್ಲ. ನಾವು ಕೆಲಸ ಮಾಡುತ್ತಿರಲಿ.. ಸುಮ್ಮನೆ ಕುಳಿತಿರಲಿ.. ಪ್ರತಿದಿನ ಬೆಳಿಗ್ಗೆ ತಪ್ಪದೆ ನಮ್ಮ ಅಕೌಂಟಿಗೆ 24 ಗಂಟೆಗಳು ಜಮಾ ಆಗಿಬಿಡುತ್ತವೆ. ಇದು ಸಮಯದ ಸಮಾನತೆಯ ಸಿದ್ಧಾಂತ.

ಆದರೆ ನಮಗೆ ಸಮಯ ಸಾಕಾಗುತ್ತಿಲ್ಲ. "ಎಲ್ಲಿದೆ ಸಾರ್ ಟೈಮ್" ಎಂದು ಕೇಳುವವರೇ ಹೆಚ್ಚು. "ಟೈಮ್ ಹೇಗೆ ಕಳೆದು ಹೋಗುತ್ತೆ... ಎನ್ನುವುದೇ ಗೊತ್ತಾಗುವುದಿಲ್ಲ"... ಎಂದು ಹೇಳುವುದನ್ನು ಕೇಳುತ್ತಿರುತ್ತೇವೆ. ಸಮಯದ ಕೊರತೆ ಎಲ್ಲರನ್ನೂ ಕಾಡುತ್ತಿದೆ. ಒಟ್ಟಿನಲ್ಲಿ ನಾವೆಲ್ಲರೂ ಸಮಯದ ಬಡವರು.

ಒಬ್ಬ ವ್ಯಕ್ತಿ ತನ್ನ ವೃತ್ತಿಪರತೆಯನ್ನು ಹೆಚ್ಚಿಸಿಕೊಳ್ಳಬೇಕಾದರೆ, ಸಮಯಪಾಲನೆಗೆ ಆದ್ಯತೆ ನೀಡಲೇಬೇಕಾಗುತ್ತದೆ. "ನಿಮಿಷ.. ಸೆಕೆಂಡುಗಳಿಗೆ ಬೆಲೆ ನೀಡದವನು, ತನ್ನ ಜೀವನಕ್ಕೂ ಬೆಲೆ ನೀಡಲಾರ" ಎಂಬ ಮಾತೊಂದಿದೆ. ಇದರಿಂದ ಆತನ ವೃತ್ತಿ ಜೀವನಕ್ಕೂ ಧಕ್ಕೆಯಾಗುತ್ತದೆ. ಅವನು ಎಂದಿಗೂ ವೃತ್ತಿಪರ ಎನಿಸಿಕೊಳ್ಳಲಾರ.

ಸಮಯ ಪಾಲನೆಯಿಂದ ಕೆಳಕಂಡ ಪ್ರಯೋಜನಗಳು ಆಗುತ್ತವೆಂದು ಸಮಯ ತಜ್ಞರು ಹೇಳಿದ್ದಾರೆ.

1. ಕೆಲಸದ ಒತ್ತಡ ಕಡಿಮೆಯಾಗುತ್ತದೆ.
2. ಕೆಲಸದಲ್ಲಿ ಏಕಾಗ್ರತೆ ಉಂಟಾಗುತ್ತದೆ.
3. ಆತ್ಮವಿಶ್ವಾಸ ಹೆಚ್ಚಾಗುತ್ತದೆ.
4. ಸಾರ್ವಜನಿಕ ಮತ್ತು ಆಂತರಿಕ ಸಂಬಂಧ ಉತ್ತಮಗೊಳ್ಳುತ್ತದೆ
5. ಜೀವನವು ಉತ್ತಮ ಗುಣಮಟ್ಟದಿಂದ ಕೂಡಿರುತ್ತದೆ.

ಮೇಲಿನ ಎಲ್ಲ ಐದು ಅಂಶಗಳನ್ನು ಒಂದೊಂದಾಗಿ ವಿಶ್ಲೇಷಿಸಿದರೆ, ಇವೆಲ್ಲವೂ ಒಬ್ಬ ವೃತ್ತಿಪರನಲ್ಲಿ ಇರಬೇಕಾದ ಅವಶ್ಯಕ ಅಂಶಗಳು.

ಪ್ರಾಮಾಣಿಕತೆ, ಬದ್ಧತೆ, ಸಮಯಪಾಲನೆ ಈ ಅಂಶಗಳನ್ನು ಮೈಗೂಡಿಸಿಕೊಂಡು ಇತರರಿಗೆ ಮಾದರಿಯಾಗಿ, ವೃತ್ತಿಪರತೆಗೆ ಇನ್ನೊಂದು ಹೆಸರು ಎನಿಸಿರುವ ಮುಂಬೈನ ಡಬ್ಬಾವಾಲಗಳ ಬಗ್ಗೆ ತಿಳಿಸುತ್ತಿದ್ದೇನೆ.


ಮುಂದೆ ಓದಿ...

- ಮುಂಬಯಿ ನಗರದಲ್ಲಿ ಡಬ್ಬಾವಾಲಾಗಳು, ವಿವಿಧ ಕಂಪೆನಿಗಳಲ್ಲಿ ಕೆಲಸ ಮಾಡುವವರಿಗೆ ಪ್ರತಿದಿನವೂ ಲಂಚ್ ಡಬ್ಬಿಗಳನ್ನು ವಿತರಿಸುತ್ತಾರೆ. ಇದೇನು ಸಣ್ಣ ಕೆಲಸ ಎಂದು ಕೊಳ್ಳಬೇಡಿ. ಈ ಕೆಲಸದಲ್ಲಿ ವಾರ್ಷಿಕ ವರಮಾನ 45.00 ಕೋಟಿ ರೂಪಾಯಿಗಳು ಇದೆ ಎಂಬುದನ್ನು ವರಮಾನ ತೆರಿಗೆ ಅಧಿಕಾರಿಗಳೇ ದೃಢಪಡಿಸಿದ್ದಾರೆ.
- 5000 ನಿರುದ್ಯೋಗಿಗಳು ಈ ಕೆಲಸವನ್ನು ಮಾಡುತ್ತಾ, ತಿಂಗಳಿಗೆ ರೂ.9000 ರಿಂದ ರೂ. 10000 ಗಳವರೆಗೆ ಸಂಪಾದಿಸುತ್ತಿದ್ದಾರೆ.
- ಒಬ್ಬೊಬ್ಬ ಡಬ್ಬಾವಾಲಾ ದಿನಕ್ಕೆ 30 ರಂತೆ ಒಟ್ಟು 1,70,000 ಡಬ್ಬಿಗಳನ್ನು ತಲುಪಿಸಿ, ಒಂದೊಂದು ಡಬ್ಬಿಗೆ ತಿಂಗಳಿಗೆ ರೂ.300 ರಿಂದ ರೂ.350 ಗಳನ್ನು ತೆಗೆದುಕೊಳ್ಳುತ್ತಾನೆ.
- ಈ ಕೆಲಸವನ್ನು ಕೇವಲ ಸೈಕಲ್ ತುಳಿಯುತ್ತಾ ನಿರ್ವಹಿಸುತ್ತಿದ್ದಾರೆ.
- ಲಂಚ್ ಡಬ್ಬಿಗಳನ್ನು ತೆಗೆದುಕೊಳ್ಳಲು ಯಾವ ಮನೆಯಿಂದ ಪ್ರಾರಂಭಿಸಿ, ನಂತರ ಯಾವ ಮನೆಗೆ ಹೋಗಬೇಕು ಎಂದು ನಿಖರವಾದ ಪ್ಲಾನಿಂಗ್ ಮಾಡಿಕೊಂಡಿರುತ್ತಾರೆ. ಯಾವುದೇ ಗೊಂದಲ ಇಲ್ಲದೆ ಸಂಬಂಧಿಸಿದವರಿಗೆ ತಲುಪಿಸುತ್ತಾರೆ.
- ಇವರ ಕೆಲಸದಲ್ಲಿ ಒಂದು ನಿಮಿಷವೂ ತಡವಾಗುವುದಿಲ್ಲ. ಲಂಚ್ ಸಮಯ ಮಧ್ಯಾಹ್ನ 1.00 ಗಂಟೆಗೆ ಇದ್ದರೆ, ಇವರು 12.50 ರೊಳಗೆ ಲಂಚ್ ಡಬ್ಬಿಯನ್ನು ತಲುಪಿಸುತ್ತಾರೆ. ಹೊರಗೆ ಮಳೆ ಬೀಳುತ್ತಿದ್ದರೂ, ಮೈ ಸುಡುವ ಬಿಸಿಲು ಇದ್ದರೂ, ಕೊರೆಯುವ ಚಳಿ ಇದ್ದರೂ... ಲೆಕ್ಕಿಸದೆ ತಮ್ಮ ಕೆಲಸಗಳನ್ನು ಉತ್ತಮವಾಗಿ ನಿರ್ವಹಿಸುತ್ತಿದ್ದಾರೆ.
- ಮುಂಬಯಿಯಲ್ಲಿ ಪ್ರಮುಖ ಸಾಫ್ಟ್‌ವೇರ್ ಸಂಸ್ಥೆಗಳು, ಬ್ಯಾಂಕುಗಳು ಮತ್ತು ವ್ಯಾಪಾರ ಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೆ ಡಬ್ಬಾವಾಲಾಗಳು ಇಲ್ಲದೆ... ದಿನವೇ ಕಳೆಯುವುದಿಲ್ಲ.
- ಇವರು ಈ ಕೆಲಸಕ್ಕೆ ಕಷ್ಟಪಡುವುದು ದಿನದಲ್ಲಿ 3 ಗಂಟೆಗಳು ಮಾತ್ರ. ಸಾಯಂಕಾಲ ಬೇರೆ ಕೆಲಸ ಮಾಡಿ 5–6 ಸಾವಿರ ಸಂಪಾದಿಸಿಕೊಳ್ಳುತ್ತಾರೆ.
- "ರೈಲು, ವಿಮಾನಗಳು ಲೇಟಾದರೂ ಪರವಾಗಿಲ್ಲ, ಊಟವನ್ನು ಲೇಟಾಗಿ ಕೊಡುವುದು ಮಹಾಪಾಪ" ಎಂದು ಪ್ರತಿಯೊಬ್ಬ ಡಬ್ಬಾವಾಲಾ ತಿಳಿದುಕೊಂಡಿದ್ದಾನೆ.
- ಕೆಲಸ ಮಾಡುವ ಸಮಯದಲ್ಲಿ, ಕೆಲಸಕ್ಕೆ ಬಾರದ ಸ್ನೇಹಗಳು, ಕುಡಿತ ಮುಂತಾದ ಚಟಗಳು ಇವರಲ್ಲಿ ಇಲ್ಲ. ರಾತ್ರಿ ಕುಡಿದರೆ ಬೆಳಿಗ್ಗೆ ಎದ್ದೇಳಲು ಆಗುವುದಿಲ್ಲವೆಂದು ಇಂತಹ ಅಭ್ಯಾಸಗಳಿಂದ ದೂರವಿದ್ದಾರೆ.
- ಇವರದೇ ಆದ ಒಂದು ಸಂಘ ಇದೆ. ನೀತಿ ನಿಯತ್ತಿನಿಂದ ಒಬ್ಬ ತಾಯಿಯಂತೆ ಊಟವನ್ನು ತಲುಪಿಸಬಲ್ಲ ಬದ್ಧತೆ ಇದೆ.
- ಯಾರಾದರೂ ಕೆಲಸದಲ್ಲಿ ಲೋಪ ಎಸಗಿದರೆ ಅವರಿಗೆ 1000 ರೂ.ಗಳ ದಂಡ ವಿಧಿಸಲಾಗುತ್ತದೆ.
- ಲಂಚ್ ಡಬ್ಬಿಗಳನ್ನು ತರಿಸಿಕೊಳ್ಳುವ ನೌಕರರು ಪ್ರತಿ ದೀಪಾವಳಿ ಹಬ್ಬಕ್ಕೆ ಬೋನಸ್ ರೂಪದಲ್ಲಿ ಒಂದು ತಿಂಗಳ ಸಂಬಳವನ್ನು ಡಬ್ಬಾವಾಲಾರಿಗೆ ಕೊಡುತ್ತಾರೆ.
- ಡಬ್ಬಾವಾಲಾಗಳ ಬದ್ಧತೆಯು ಮ್ಯಾನೇಜ್‌ಮೆಂಟ್ ಗುರುಗಳನ್ನು ಆಶ್ಚರ್ಯಪಡಿಸಿದೆ. ಅನೇಕ ಎಂ.ಬಿ.ಎ. ವಿದ್ಯಾರ್ಥಿಗಳಿಗೆ ಸಂಶೋಧನಾ ವಿಷಯವಾಗಿದೆ. ಅಮೇರಿಕಾದ ಃಣುಟಿಜ ಒಚಿಟಿಚಿರಜಟಜಟಿಣ ಮ್ಯಾಗಝೀನ್ ನಲ್ಲಿ ವರದಿಯಾಗಿದೆ.
- ಮುಂಬಯಿ ನಗರದ ಡಬ್ಬಾವಾಲಾಗಳ ಕೆಲಸದ ಪ್ಲಾನಿಂಗ್, ಸಮಯ ಪ್ರಜ್ಞೆ, ಗುಣಮಟ್ಟದ ಸೇವೆ ಮತ್ತು ಬದ್ಧತೆಯನ್ನು ಕೇಳಿ ತಿಳಿದುಕೊಂಡ, ಇಂಗ್ಲೆಂಡಿನ ರಾಜಕುಮಾರ ಪ್ರಿನ್ಸ್ ಚಾರ್ಲ್ಸ್‌ರವರು ಭಾರತಕ್ಕೆ ಬಂದಿದ್ದಾಗ, ಡಬ್ಬಾವಾಲಾಗಳ ಜೊತೆ ಪ್ರತ್ಯೇಕವಾಗಿ ಮಾತನಾಡಿ, ಸಂತೋಷಪಟ್ಟು ಅವರ ನಾಯಕನನ್ನು ಇಂಗ್ಲೆಂಡಿಗೆ ಆಹ್ವಾನಿಸಿ ಸನ್ಮಾನ ಮಾಡಿದ್ದು ನಿಜಕ್ಕೂ ಗ್ರೇಟ್!

ವೃತ್ತಿಪರತೆ ಬಗ್ಗೆ ಬಹುಶಃ ಇದಕ್ಕಿಂತ ಮತ್ತೊಂದು ಉದಾಹರಣೆ ಬೇಕಾಗುವುದಿಲ್ಲ. ಡಬ್ಬಾವಾಲಾಗಳಿಂದ ನಾವು ಕಲಿಯುವುದು ಬಹಳಷ್ಟಿವೆ. ಅಲ್ಲವೆ....? ಮೇಲಿನ ಎಲ್ಲ ಅಂಶಗಳನ್ನು ಆಧರಿಸಿ, ಸಹಕಾರಿ ಸಂಸ್ಥೆಗಳಲ್ಲಿ ವೃತ್ತಿಪರತೆ ಎಂಬುದರ ಬಗ್ಗೆ ವಿವರವಾದ ಲೇಖನವನ್ನು ಮುಂದಿನ ಸಂಚಿಕೆಯಲ್ಲಿ ನೀಡಲಾಗುತ್ತದೆ.

■

Swabhimani Sahakari, Monthly, Posted at GPO-MBC Bengaluru Post Office 560001,
Posting Day 12th. Registered No. RNP/BGS/2094/2011-13
RNI No. KARBIL - 2004/18001
Pages 20



# ವ್ಯಕ್ತಿ ಪರಿಚಯ

## ಸಾಮಾಜಿಕ ಕಳಕಳಿಯ ಶ್ರೀ ಕಲ್ಯಾಣಸುಂದರಂ

ಶ್ರೀ ಕಲ್ಯಾಣ ಸುಂದರಂರವರು ಕೇರಳದಲ್ಲಿ ಒಂದು ಶಿಕ್ಷಣ ಸಂಸ್ಥೆಯಲ್ಲಿ ಲೈಬ್ರೇರಿಯನ್ ಆಗಿ ಸುಮಾರು 30 ವರ್ಷ ಕಾರ್ಯನಿರ್ವಹಿಸಿದವರು. ತನ್ನ ಸೇವಾವಧಿ ಪೂರ್ತಿ ಇವರು ತಮ್ಮ ಸಂಬಳವನ್ನು (ಬಡವರಿಗೆ) ಇಲ್ಲದವರಿಗೆ ದಾನಮಾಡಿದರು ತನ್ನ ಹೊಟ್ಟೆಪಾಡಿಗಾಗಿ ಒಂದು ಹೋಟೆಲ್‌ನಲ್ಲಿ ಸರ್ವರ ಆಗಿ ಕಾರ್ಯನಿರ್ವಹಿಸಿದರು. ತನ್ನ ಸೇವೆ ಯಿಂದ ನಿವೃತ್ತಿಯಾದ ಮೇಲೆ ಅವರಿಗೆ ರೂ. 10 ಲಕ್ಷಗಳ ಹಣ ಬಂದಿರುವುದನ್ನು ಸಹ ಇಲ್ಲದವರಿಗೆ ದಾನಮಾಡಿದ ಮಹಾದಾನಿ ತನ್ನ ಸಂಬಳವನ್ನೆಲ್ಲ ಸಮಾಜದ ಕನಿಷ್ಟ ವ್ಯಕ್ತಿಗೆ ದಾನಮಾಡಿದ ಮೊತ್ತಮೊದಲ ವ್ಯಕ್ತಿ ಅದ್ಭುತ ವ್ಯಕ್ತಿ ಈ ಕಲ್ಯಾಣಸುಂದರಮ್.

ಇವರ ಈ ಅಧ್ಬುತ ಸಾಮಾಜಿಕ ಕಳಕಳಿಯನ್ನು ಗುರುತಿಸಿದ ವಿಶ್ವಸಂಸ್ಥೆಯವರು ಇವರಿಗೆ 20 ನೇ ಶತಮಾನದ ಅಪರೂಪದ ಅಧ್ಬುತ ವ್ಯಕ್ತಿ ಎಂದು ಗೌರವಿಸಿ ಅವರಿಗೆ 30 ಕೋಟಿ ರೂಗಳನ್ನು ನೀಡಿದರೆ ಇವರು ಸದರಿ ಮೊತ್ತವನ್ನು ಸಹ ಸಾಮಾಜಿಕ ಕಾರ್ಯಕ್ಕಾಗಿ ದಾನಮಾಡಿದ್ದಾರೆ. ಇವರ ಈ ಗುಣವನ್ನು ಮೆಚ್ಚಿಕೊಂಡ ಹಿರಿಯ ಸಿನಿತಾರೆ ರಜನಿಕಾಂತ ರವರು ಶ್ರೀಯುತರನ್ನು ತಮ್ಮ ದತ್ತುತಂದೆಯಾಗಿ ಸ್ವೀಕರಿಸಿರುವುದು ಅತ್ಯಂತ ಸಂತೋಷದ ವಿಷಯ.

ಇಂಥ ಮಹನೀಯರೊಬ್ಬರು ನಮ್ಮ ದೇಶದಲ್ಲಿ ನಮ್ಮ ಮಧ್ಯದಲ್ಲಿ ಇರುವುದನ್ನು ತಿಳಿಯದ ನಾವು ಭಾರತೀಯರಲ್ಲಿ ಇಂತಹ ಅಪರೂಪದ ಮಹಾತ್ಮರು ಇದ್ದಾರೆ ಎಂದು ಅವರ ಬಗ್ಗೆ ನಮ್ಮ ದೇಶದ ಬಗ್ಗೆ ಹೆಮ್ಮೆ ಪಡಬೇಕಲ್ಲವೇ. ಶ್ರೀ ಕಲ್ಯಾಣಸುಂದರಮ್‌ನವರಂತಹ ಹೆಚ್ಚು ಜನರನ್ನು ನಮ್ಮ ತಾಯಿ ಭಾರತಾಂಬೆ ಹೊಂದಲಿ ಅವರಂತಹ ಉದಾತ್ತ ಸಾಮಾಜಿಕ ಕಳಕಳಿಯನ್ನು ನಮ್ಮೆಲ್ಲರಿಗೂ ಕರುಣಿಸಲಿ ಶ್ರೀ ಕಲ್ಯಾಣಸುಂದರಮ್‌ನವರಿಗೆ ಆಯುರಾರೋಗ್ಯ ಐಶ್ವರ್ಯವನ್ನು ಭಗವಂತನು ದಯಪಾಲಿಸಲಿ ಎಂದು ಹಾರೈಸೋಣ.

**– ಸಂಗ್ರಹ ಶ್ರೀ ಶ್ರೀಕಾಂತ ಬರುವೆ.**

## ... ಬ್ಯಾಂಕಿಂಗ್ ಒಂಬುಡ್ಸ್‌ಮನ್

...16ನೇ ಪುಟದಿಂದ

1) ಗ್ರಾಹಕ ಬ್ಯಾಂಕಿನಿಂದ ತನಗೆ ಆಗಿರುವ ಕುಂದು–ಕೊರತೆ, ತೊಂದರೆಯನ್ನು ಪರಿಹರಿಸಲು ಬ್ಯಾಂಕಿಗೆ ಮೊದಲು ದೂರನ್ನು ಸಲ್ಲಿಸದಿದ್ದಲ್ಲಿ.
2) ಗ್ರಾಹಕನಿಗೆ ಆಗಿರುವ ಕುಂದು–ಕೊರತೆ, ತೊಂದರೆಯ ಕುರಿತು ಬ್ಯಾಂಕ್ ಲಿಖಿತವಾಗಿ ಉತ್ತರ ನೀಡಿ ಒಂದು ವರ್ಷವನ್ನು ಮೀರಿದ್ದರೆ ಅಥವಾ ಬ್ಯಾಂಕ್ ಯಾವುದೇ ಉತ್ತರವನ್ನು ನೀಡದೇ ಒಂದು ವರ್ಷ ಮೀರಿದ್ದರೆ.
3) ಹುರಳಿಲ್ಲದ, ಕೆರಳಿಸುವ ಅಥವಾ ನಿಷ್ಪ್ರಯೋಜಕ ದೂರು.
4) ನೀಡಿರುವ ದೂರು ಬ್ಯಾಂಕಿಂಗ್ ಒಂಬುಡ್ಸ್‌ಮನ್ ಯೋಜನೆ, 2006ರ ವ್ಯಾಪ್ತಿಯಲ್ಲಿ ಇರದಿದ್ದರೆ.
5) **ಈಗಾಗಲೇ ದೂರನ್ನು ಸ್ವೀಕರಿಸಿ ಆ ಕುರಿತು ತೀರ್ಪನ್ನು ನೀಡಿದ್ದರೆ.**

**ದೂರನ್ನು ಎಲ್ಲಿ ನೀಡಬೇಕು?**

ಬ್ಯಾಂಕ್ ಇರುವ ಕಾರ್ಯವ್ಯಾಪ್ತಿಯಲ್ಲಿನ ಒಂಬುಡ್ಸ್‌ಮನ್‌ಗೆ ದೂರನ್ನು ನೀಡಬೇಕು. ಕ್ರೆಡಿಟ್ ಕಾರ್ಡ್ ಮತ್ತು ಇತರೆ ಸೇವೆಗಳಿಗೆ ಮತ್ತು ಕೇಂದ್ರಿಕೃತ ಕಾರ್ಯಾಚರಣೆಗಳಿಗೆ ಸಂಬಂಧಿಸಿದ ದೂರುಗಳನ್ನು ಅವರು ಯಾವ ಬಿಲ್ಲಿಂಗ್ ವಿಳಾಸದಲ್ಲಿ ಇರುತ್ತಾರೋ ಆ ವ್ಯಾಪ್ತಿಯ ಒಂಬುಡ್ಸ್‌ಮನ್‌ಗೆ ದೂರನ್ನು ನೀಡಬಹುದು.

1. 10 ಲಕ್ಷಕ್ಕಿಂತ ಹೆಚ್ಚಿನಪರಿಹಾರವನ್ನು ಫಿರ್ಯಾದಿನಲ್ಲಿ ಕೇಳಿದ್ದರೆ
2. ದಾಖಲಾತಿಗಳೂ ಮತ್ತು ಮೌಖಿಕ ಸಾಕ್ಷಿಗಳು ಹಾಗೂ ಒಂಬುಡ್ಸ್‌ಮನ್ ಎದುರುಗಿನ ನಡಾವಳಿಗಳು ಸೂಕ್ತವಾಗಿಲ್ಲದ ಕಾರಣ ವಿಚಾರಣೆಗೆ ಯೋಗ್ಯವಲ್ಲವಾದರೆ
3. ಸಕಾರಣವಲ್ಲದ ದೂರಾಗಿದ್ದರೆ.
4. ಗ್ರಾಹಕನಿಗೆ ಬ್ಯಾಂಕಿಂಗ್ ಸೇವೆಯಿಂದ ತೊಂದರೆ, ನಷ್ಟವಾಗಿಲ್ಲವೆಂದು ಒಂಬುಡ್ಸ್‌ಮನ್ ಅಭಿಪ್ರಾಯಪಟ್ಟರೆ.

ಒಂಬೂಡ್ಸ್‌ಮನ್ ನೀಡುವ ತೀರ್ಮಾನ ಯಾವುದೇ ಪಕ್ಷಗಾರರಿಗೆ ಒಪ್ಪಿಗೆಯಾಗದಿದ್ದರೂ ಸಹ ಅಂತಹ ತೀರ್ಮಾನದ ವಿರುದ್ಧ ಭಾರತೀಯ ರಿಸರ್ವ್ ಬ್ಯಾಂಕಿನ ಡೆಪ್ಯೂಟಿ ಗವರ್ನರ್‌ಗೆ ಮೇಲ್ಮನವಿ ಸಲ್ಲಿಸಬಹುದು. ಒಂಬುಡ್ಸ್‌ಮನ್ ತೀರ್ಮಾನ ನೀಡಿದ 30 ದಿನಗಳ ಒಳಗಾಗಿ ಮೇಲ್ಮನವಿಯನ್ನು ಸಲ್ಲಿಸಬೇಕು. ■

**Leader of Leaders - KarnataKa state souharda federaL Co-op-Ltd BangaLore**

**ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು**

| | | |
|---|---|---|
| ಅಧ್ಯಕ್ಷ | ಶ್ರೀ ಎಸ್. ಆರ್. ಸತೀಶಚಂದ್ರ | 9448696108 |
| ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತೀಕರ | 9448270104 |
| ವ್ಯವಸ್ಥಾಪಕ ನಿರ್ದೇಶಕ | ಶ್ರೀ ಶರಣಗೌಡ ಜಿ. ಪಾಟೀಲ | 9740401685 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ನಾರಾಯಣ ಹೆಗಡೆ | 9480579882 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ವೈ. ಕುಮಾರ | 9845893455 |
| ಸಹ ಪ್ರಧಾನ ವ್ಯವಸ್ಥಾಪಕ | ಶ್ರೀಮತಿ ಕೃತಿ ಜನಾರ್ಧನ್ | 9900244207 |
| ತರಬೇತಿ ಅಧಿಕಾರಿ | ಶ್ರೀ ವಿ.ಜೆ. ಕಾರಕೂನ | 9482734077 |
| ಕಾನೂನು ವಿಭಾಗದ ಅಧಿಕಾರಿ | ಶ್ರೀ ಶ್ರೀಕಾಂತ | 9916814888 |
| ಬೆಂಗಳೂರು ವಿಭಾಗಾಧಿಕಾರಿ | ಶ್ರೀ ರಘುನಂದನ್ ಕೆ. | 9481036592 |
| ಬೆಳಗಾವಿ ವಿಭಾಗಾಧಿಕಾರಿ | ಶ್ರೀ ಜಿ.ಎಸ್. ಟೋಪಣ್ಣನವರ್ | 9916367887 |
| ಗುಲ್ಬರ್ಗಾ ವಿಭಾಗಾಧಿಕಾರಿ | ಶ್ರೀ ಸಂಜಯ ಕೋರಟಕರ | 9900990268 |
| ಮೈಸೂರು ವಿಭಾಗಾಧಿಕಾರಿ | ಶ್ರೀ ಶಿವಕುಮಾರ ಬಿರಾದಾರ | 9844454995 |

**ಇವರಿಂದ ಪ್ರಕಟಿತ :**

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್ ರಾಜಾಜಿನಗರ. ಬೆಂಗಳೂರು – 10.
web : www.souharda.coop,
E-mail : souharda@souharda.coop,
**ದೂ.ಸಂ :** 23378375/76/77/78/79/80 & 23474408, 23573291
ಸಂಪಾದಕ, ಪ್ರಕಾಶಕ : **ಶರಣಗೌಡ ಜಿ. ಪಾಟೀಲ**
ಸಂಚಿಕೆ ಸಿದ್ಧತೆ : **ವಿ.ಜೆ.ಕಾರಕೂನ**
ಮುದ್ರಣ : **ವರ್ಣ ಕಮ್ಯುನಿಕೇಷನ್ಸ್**, ಬೆಂಗಳೂರು.

**ಬೆಳಗಾವಿ ವಿಭಾಗೀಯ ಕಛೇರಿ ವಿಳಾಸ :** ನಂ. 436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ – 1, ದೂ. 0831–2401551
**ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ :** ಗುಲ್ಬರ್ಗಾ ನಂ 1–4/3 ಎ ಸಂಜೀವರಾವ್ ಬಡಾವಣೆ,
ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಗುಲ್ಬರ್ಗಾ – 585102. ದೂ. 08472–270222, ಮೊ. 9900990268.

Edited, Printed and Published by Sharan Gouda G. Patil –Managing Director, on behalf of Karnataka State Souharada Federal Co operative, Nirman Bhavan complex, Dr. Rajkumar Road, 1st Block, Rajajinagar, Bangalore-560 010